ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793

KANNADA DAILY NEWS PAPER
ಕನ್ನಡ ದಿನಪತ್ರಿಕೆ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 22
ಬೆಲೆ ರೂ : 2.00
ರಾಯಚೂರು
ಪುಟ: 4

DAIRYADA DAARI
RNI NO: KNKAN/25/A2795 ಭಾನುವಾರ: 28-12-2025

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

## KEA : ಜ.10 ಮತ್ತು 12ರಂದು ನಡೆಯಬೇಕಿದ್ದ ನೇಮಕಾತಿ ಪರೀಕ್ಷೆ ಜ.18ಕ್ಕೆ ಮುಂದೂಡಿಕೆ

**ಬೆಂಗಳೂರು, ಡಿ.27**–ಕೆ.ಎಸ್.ಡಿ.ಎಲ್. ಮತ್ತು ಕೃಷಿ ಮಾರಾಟ ಇಲಾಖೆಯ ವಿವಿಧ ಹುದ್ದೆಗಳಿಗೆ ಜನವರಿ 10 ಮತ್ತು 12ರಂದು ನಡೆಸಬೇಕಿದ್ದ ನೇಮಕಾತಿ ಲಿಖಿತ ಪರೀಕ್ಷೆಯನ್ನು ಜನವರಿ 18ಕ್ಕೆ ಮುಂದೂಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಕೃಷಿ ಮಾರಾಟ ಇಲಾಖೆಯ ಮಾರುಕಟ್ಟೆ ಮೇಲ್ವಿಚಾರಕ ಹುದ್ದೆಗೆ ಜನವರಿ 10ರಂದು ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಲಿಮಿಟೆಡ್‌ನ ಕಿರಿಯ ಅಧಿಕಾರಿ (ಉತ್ಪಾದನೆ ಮತ್ತು ನಿರ್ವಹಣೆ), ಕಿರಿಯ ಅಧಿಕಾರಿ (ಸಾಮಗ್ರಿ ಮತ್ತು ಉಗ್ರಾಣ) ಹುದ್ದೆಗಳಿಗೆ ಜನವರಿ 12ರಂದು ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಕೆಲವು ತಾಂತ್ರಿಕ ಕಾರಣಗಳಿಂದಾಗಿ ಈ ದಿನಾಂಕಗಳ ಬದಲಿಗೆ ಜನವರಿ 18 ರಂದು ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಕೆಇಎ ಸ್ಪಷ್ಟಪಡಿಸಿದೆ.

ಉಳಿದ ನೇಮಕಾತಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳಿಗೆ ಕೆಇಎ ವೆಬ್ ಸೈಟ್ ನೋಡಬಹುದಾಗಿದೆ.

# ಡಿಜಿಟಲ್ ಜನಗಣತಿಗೆ ಸಿದ್ಧತೆ ಪೂರ್ಣ

**ನವದೆಹಲಿ,ಡಿ.27**–2027 ರಲ್ಲಿ ಭಾರತದ ಮೊದಲ ಡಿಜಿಟಲ್ ಜನಗಣತಿಗೆ ಸಿದ್ಧತೆಗಳು ಪೂರ್ಣಗೊಂಡಿವೆ. ಮನೆ ಪಟ್ಟಿ ಮತ್ತು ವಸತಿ ಜನಗಣತಿ ಏಪ್ರಿಲ್ 2026 ರಲ್ಲಿ ಪ್ರಾರಂಭವಾಗಲಿದ್ದು,

ಜನಸಂಖ್ಯಾ ಎಣಿಕೆ ಫೆಬ್ರವರಿ 2027 ರಲ್ಲಿ ನಡೆಯಲಿದೆ. ಈ ಪ್ರಕ್ರಿಯೆಯು ಆಡಳಿತಾತ್ಮಕ ಮತ್ತು ನೀತಿ ನಿರೂಪಣೆಯಲ್ಲಿ ಸಹಾಯ ಮಾಡುತ್ತದೆ.

2027 ರ ಭಾರತದ ಜನಗಣತಿಯ ಮೊದಲ ಹಂತದ ಪೂರ್ವಭಾವಿ ಪರೀಕ್ಷೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಇದು ದೇಶದ ಮೊದಲ ಡಿಜಿಟಲ್ ಜನಗಣತಿಯತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ. ಏಪ್ರಿಲ್ 2026 ರಿಂದ ಪ್ರಾರಂಭವಾಗುವ ಮೊದಲ ಹಂತವು ಮನೆ ಪಟ್ಟಿ ಮತ್ತು ವಸತಿ ಜನಗಣತಿಯನ್ನು ಒಳಗೊಂಡಿರುತ್ತದೆ, ಆದರೆ ಜನಗಣತಿಯ ಎರಡನೇ ಹಂತವನ್ನು ಫೆಬ್ರವರಿ 2027 ರಲ್ಲಿ ನಡೆಸಲಾಗುವುದು.

ಸರ್ಕಾರಿ ಅಧಿಕಾರಿಗಳ ಪ್ರಕಾರ, ಈ ಡಿಜಿಟಲ್ ಜನಗಣತಿಗಾಗಿ ಉಪ-ಜಿಲ್ಲೆ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ವ್ಯಾಪಕ ಸಿದ್ಧತೆಗಳು ನಡೆಯುತ್ತಿವೆ. ಲಕ್ಷಾಂತರ ಕ್ಷೇತ್ರ ಸಿಬ್ಬಂದಿಯ ನಿಯೋಜನೆ, ದತ್ತಾಂಶ ಸಂಗ್ರಹಣೆಗಾಗಿ ಮೊಬೈಲ್ ಅಪ್ಲಿಕೇಶನ್‌ಗಳ ಬಳಕೆ ಮತ್ತು ಡಿಜಿಟಲ್ ಅಭಿಯಾನದ ಸುರಕ್ಷತೆಯಂತಹ ನಿರ್ಣಾಯಕ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ. ಏಪ್ರಿಲ್ ನಿಂದ ಸೆಪ್ಟೆಂಬರ್ 2026 ರವರೆಗೆ ನಿಗದಿಯಾಗಿರುವ ಮೊದಲ ಹಂತದ ಸುಗಮ ನಡವಳಿಕೆಗಾಗಿ, ಎಲ್ಲಾ ಹಂತಗಳಲ್ಲಿ ಜನಗಣತಿ ಅಧಿಕಾರಿಗಳನ್ನು



ನಿಯೋಜಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2027 ರ ಜನಗಣತಿಯ ಎರಡು ಹಂತಗಳು–2027 ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಮನೆ ಪಟ್ಟಿ ಮತ್ತು ವಸತಿ ಜನಗಣತಿಯನ್ನು ಒಳಗೊಂಡಿರುವ ಮೊದಲ ಹಂತವು ಏಪ್ರಿಲ್ ನಿಂದ ಸೆಪ್ಟೆಂಬರ್ 2026 ರವರೆಗೆ ನಡೆಯಲಿದೆ. ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದ ಹಿಮದಿಂದ ಆವೃತವಾದ ಪ್ರದೇಶಗಳಾದ ಲಡಾಖ್‌ನಲ್ಲಿ ಜನಗಣತಿಯನ್ನು ಸೆಪ್ಟೆಂಬರ್ 2026 ರಲ್ಲಿ ನಡೆಸಲಾಗುವುದು. ಎರಡನೇ ಹಂತವಾದ ಜನಸಂಖ್ಯಾ ಎಣಿಕೆಯನ್ನು ಫೆಬ್ರವರಿ 2027 ರಲ್ಲಿ ನಡೆಸಲಾಗುವುದು. ಈ ಪ್ರಕ್ರಿಯೆಯು ಧರ್ಮ, ಜಾತಿ, ಭಾಷೆ, ಸಾಕ್ಷರತೆ, ಆರ್ಥಿಕ ಚಟುವಟಿಕೆ, ವಲಸೆ ಮತ್ತು ಫಲವತ್ತತೆ ದರಗಳು ಸೇರಿದಂತೆ ದೇಶದ ಜನಸಂಖ್ಯಾಶಾಸ್ತ್ರದ ಬಗ್ಗೆ ಪ್ರಮುಖ ಮಾಹಿತಿಯನ್ನು ಸಂಗ್ರಹಿಸುತ್ತದೆ.

ಜನಗಣತಿಯಲ್ಲಿ ಸರಿಸುಮಾರು 3 ಮಿಲಿಯನ್ ಕ್ಷೇತ್ರ ಕಾರ್ಯಕರ್ತರು ಕೆಲಸ ಮಾಡಲಿದ್ದು, 10.2 ಮಿಲಿಯನ್ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿಸಲಿದ್ದಾರೆ. ಹೆಚ್ಚುವರಿಯಾಗಿ, ಸುಮಾರು 18,600 ತಾಂತ್ರಿಕ ಸಿಬ್ಬಂದಿ 550 ದಿನಗಳವರೆಗೆ ಸ್ಥಳೀಯ ಮಟ್ಟದಲ್ಲಿ ಡಿಜಿಟಲ್ ಡೇಟಾ ನಿರ್ವಹಣೆ ಮತ್ತು ಮೇಲ್ವಿಚಾರಣೆಗೆ ಸಹಾಯ ಮಾಡುತ್ತಾರೆ.

ಡಿಸೆಂಬರ್ 12 ರಂದು ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು 11,718.24 ಕೋಟಿ ವೆಚ್ಚದಲ್ಲಿ 2027 ರ ಜನಗಣತಿಗೆ ಅನುಮೋದನೆ ನೀಡಿದೆ .

ಡಿಜಿಟಲ್ ಸಾಧನಗಳು ಮತ್ತು ಮೊಬೈಲ್ ಅಪ್ಲಿಕೇಶನ್‌ಗಳ ಬಳಕೆಯಲ್ಲಿ ಕ್ಷೇತ್ರ ಸಿಬ್ಬಂದಿಗೆ ತರಬೇತಿ ನೀಡಲಾಗುವುದು.

# ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆದ ಮುಸ್ಲಿಂ ಮುಖಂಡ ಅಬ್ದುಲ್ ಕರೀಮ್ ಸಾಬ್





ಧೈರ್ಯದ ದಾರಿ

**ಕವಿತಾಳ ,ಡಿ.27**– ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಕವಿತಾಳ ಪಟ್ಟಣದ ಮುಸ್ಲಿಂ ಮುಖಂಡ ಅಬ್ದುಲ್ ಕರೀಂ ಸಾಬ್ ತಮ್ಮ ಮನೆಯಲ್ಲಿ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಭಾವೈಕ್ಯತೆ ಮೆರೆದಿದ್ದಾರೆ.

ಪೂಜಾ ಕಾರ್ಯಕ್ರಮ ಮುಗಿಸಿಕೊಂಡು ಮನೆಗೆ ಬಂದ ಅಯ್ಯಪ್ಪಸ್ವಾಮಿ ಮಾಲಾಧಾರಿಗಳಿಗೆ ಬಿ.ಎ.ಕರೀಂಸಾಬ್ ಸ್ವತಃ ಊಟ ಬಡಿಸಿದರು. ಹೋಳಿಗೆ, ಚಪಾತಿ, ಪಲ್ಯ, ಹಸಿ ತರಕಾರಿ, ಚಿತ್ರಾನ್ನ , ಹಪ್ಪಳ , ಅನ್ನ ಸಾಂಬಾರು ಉಣಬಡಿಸಿದರು.

'ಅಯ್ಯಪ್ಪ ಸ್ವಾಮಿ ಭಕ್ತರಾಗಲು ಯಾವುದೇ ಜಾತಿ, ಧರ್ಮದ ಭೇದವಿಲ್ಲ. ಹೀಗಾಗಿ ಕಳೆದ ನಾಲ್ಕು ವರ್ಷಗಳಿಂದ ಅಯ್ಯಪ್ಪಸ್ವಾಮಿ ಭಕ್ತರಿಗೆ ಮನೆಯಲ್ಲಿ ಭೋಜನ ವ್ಯವಸ್ಥೆ ಮಾಡುತ್ತಿದ್ದೇನೆ. ಧರ್ಮ, ಜಾತಿ ಎಣಿಸದೇ ಮಾನವಕುಲಕ್ಕೆ ಒಳಿತನ್ನು ಬಯಸುವುದು ಶ್ರೇಷ್ಠ ಎಂಬುದು ನನ್ನ ನಂಬಿಕೆ' ಹಿಂದೂ-ಮುಸ್ಲಿಂ ಭಾವೈಕ್ಯತೆ ಪರಸ್ಪರ ಗೌರವ, ಸಾಮರಸ್ಯ ಮತ್ತು ಸಹೋದರತ್ವದೊಂದಿಗೆ ಬದುಕಬೇಕು ಧಾರ್ಮಿಕ ಆಚರಣೆಗಳ ಭಿನ್ನತೆಗಳ ನಡುವೆಯೂ ಹಬ್ಬಗಳಲ್ಲಿ ಭಾಗವಹಿಸುವುದು, ಒಟ್ಟಾಗಿ ಹಬ್ಬ ಆಚರಿಸುವುದು, ಪ್ರಾರ್ಥನಾ ಸ್ಥಳಗಳಿಗೆ ಭೇಟಿ ನೀಡಿ ಪರಸ್ಪರ ಒಳಿತಿಗಾಗಿ ಹಾರೈಸುವಂತಹ ಹಲವಾರು ನಿದರ್ಶನಗಳ ಮೂಲಕ ವ್ಯಕ್ತವಾಗುತ್ತದೆ, ಭಾರತದಂತಹ ದೇಶದಲ್ಲಿ ಇದು ಒಂದು ದೊಡ್ಡ ಶಕ್ತಿಯಾಗಿದೆ. ನಾವು ಪ್ರಸಾದ ವ್ಯವಸ್ಥೆ ಮಾಡುವುದು ಕುಟುಂಬದವರೆಲ್ಲ ಸೇವೆ ಮಾಡುವುದು ನಮ್ಮ ಮನಸ್ಸಿಗೆ ತೃಪ್ತಿ ಕೊಡುತ್ತದೆ ಎಂದು ಕರೀಂಸಾಬ್ ಹೇಳಿದರು...ಅಯ್ಯಪ್ಪ ಭಕ್ತರಿಗೆ ಯಾವುದೇ ಜಾತಿ, ಧರ್ಮದ ಭೇದ ಭಾವ ಇಲ್ಲ. ಹಿಂದೂ, ಮುಸ್ಲಿಂ, ಕ್ರೈಸ್ತ ಹೀಗೆ ಯಾವುದೇ ಧರ್ಮದವರ ಮನೆಯಲ್ಲಿ ಪೂಜೆ ಮಾಡಲು ಮತ್ತು ಪ್ರಸಾದ ಸ್ವೀಕರಿಸಲು ಅವಕಾಶವಿದೆ. ಭಕ್ತಿಯಿಂದ ಆಹ್ವಾನ ನೀಡಿದರೆ ನಾವು ತಿರಸ್ಕರಿಸುವುದಿಲ್ಲ' ಎಂದು ಗುರುಸ್ವಾಮಿ ಚನ್ನಯ್ಯ ಸ್ವಾಮಿ ತಿಳಿಸಿದರು..ಈ ಭಾಗದಲ್ಲಿ ಬಿ.ಎ.ಕರೀಂಸಾಬ್ ಅವರು ಸತತ ನಾಲ್ಕು ವರ್ಷಗಳಿಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡುತ್ತಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು... ಈ ಪ್ರಸಾದ ವ್ಯವಸ್ಥೆಯ ಕಾರ್ಯಕ್ರಮದಲ್ಲಿ ಕವಿತಾಳ್ ಪೀಠದ ಎಲ್ಲಾ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು, ಬಿ ಅಬ್ದುಲ್ ಕರೀಮ್ ಸಾಬ್ ಅವರ ಕುಟುಂಬದವರಾದ ಎಂ ಎ ವಹಾಬ್ , ಇರ್ಫಾನ್ ಕೆ , ಮಹಮ್ಮದ್ ಕಲೀಮ್ , ಇನ್ನಿತರರು ಸೇವೆ ಸಲ್ಲಿಸಿದರು..

# ಎಂ.ಎನ್.ಆರ್.ಇ.ಜಿ.ಎ ನಿರ್ನಾಮ ನಿಲ್ಲಿಸಲು ಮೋದಿ ಸರ್ಕಾರಕ್ಕೆ ಸಂಯುಕ್ತ ಕಿಸಾನ್ ಮೋರ್ಚ್ ಎಚ್ಚರಿಕೆ.



ಧೈರ್ಯದ ದಾರಿ

**ಸಿಂದನುರು,ಡಿ.27**–ತಾಲೂಕಿನ ಮುಳ್ಳೂರು, ಮಲ್ಲಾಪುರ, ಗ್ರಾಮದಲ್ಲಿ ಕೇಂದ್ರ ಸರ್ಕಾರದ ಹೊಸ ಕಾಯ್ದೆಯಾದ ನರೇಗಾ ಕಾರ್ಮಿಕರು ಸುಟ್ಟು ಹಾಕಿದರು. ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ಸಂಪೂರ್ಣವಾಗಿ ಮುಚ್ಚುವ ಹುನ್ನಾರ ಮಾಡುತ್ತಿದೆ ಎಂದು ಉದ್ಯೋಗ ಖಾತ್ರಿ ಕಾರ್ಮಿಕರು, ರೈತರು, ಆಕ್ರೋಶಗೊಂಡರು.ವಿಬಿ-ಜಿ.ಆರ್.ಎ.ಎಮ್.ಜಿ ಶಾಸನವು ಉದ್ಯೋಗದ ಶಾಸನಬದ್ದ ಹಕ್ಕನ್ನು ನಿರಾಕರಿಸುತ್ತದೆ. ವಿತ್ತೀಯ ಒಕ್ಕೂಟ ವ್ಯವಸ್ಥೆಯನ್ನು ಹಾಳುಮಾಡುತ್ತದೆ. ಜಿಎಸ್ಟಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರಾಜ್ಯಗಳ ತೆರಿಗೆ ಅಧಿಕಾರವನ್ನು ಮರುಸ್ಥಾಪಿಸಬೇಕು. ತೆರಿಗೆ ಸಂಗ್ರಹದಲ್ಲಿ ರಾಜ್ಯಗಳಿಗೆ ಪಾಲನ್ನು ಶೇ.60 ರಷ್ಟು ಹೆಚ್ಚಿಸಬೇಕು. ದೇಶದಲ್ಲಿ ಬರುವ ಆದಾಯ ಕೇಂದ್ರಕ್ಕೆ ಹೊರಟಿದೆ ಬಡವರ ಉದ್ಯೋಗ ಖಾತ್ರಿ ರಾಜ್ಯ ಶೇ. 40 ರಷ್ಟು, ಕೇಂದ್ರ ಶೇ. 60 ರಷ್ಟು ಹಣ ಒದಗಿಸಬೇಕೆಂಬ ಹೊಸ ಕಾಯ್ದೆಯನ್ನು ಡಿಸೆಂಬರ್ 15 ರಂದು ಮಾಡಿದೆ. 20 ವರ್ಷಗಳಿಂದ ಉದ್ಯೋಗ ಖಾತ್ರಿಯ ಹಣ ಕೇಂದ್ರ ಸರ್ಕಾರವೆ ಕೊಟ್ಟಿದೆ. ಈಗ ಏಕಾಏಕಿ ಈ ರೀತಿ ಮಾಡಿ ಉದ್ಯೋಗವನ್ನ ಮುಚ್ಚಾವ ಮಾಸ್ಟರ್ ಪ್ಲಾನ್ ಕೇಂದ್ರ ಸರ್ಕಾರ ಮಾಡುತ್ತಿದೆ. ಈ ಹೊಸ ಕಾಯ್ದೆಯನ್ನು ಎಲ್ಲಾ ರೈತರು ಕೃಷಿಯಲ್ಲಿ ಕೆಲಸ ಮಾಡುವರು ವಿರೋಧಿಸಬೇಕಿದೆ ಎಂದು ಬಸವಂತರಾಯಗೌಡ ಕಲ್ಲೂರು, ಯಂಕೋಬ ಕುರುಬರು, ವಿರುಪಾಕ್ಷಗೌಡ, ನಾಗೇಶಗೌಡ, ಹೇಳಿದರು.

ಈ ವೇಳೆ: ಮಲ್ಲಾಪುರದ ಗಿರಿಜಮ್ಮ ನಾಯಕ, ಶೃತಿ ಮೇಟಿ, ಪಾರ್ವತಿ ಕುಂಬಾರ, ಮಲ್ಲಪ್ಪ ಬೆಟ್ಟಪ್ಪ, ನಾಗಮ್ಮ ಭಂಡಾರಿ ನಾಗವೇಣಿ ಹಾಗೂ ಮುಳ್ಳೂರು ಗ್ರಾಮದ ಅನುಸೂಯಮ್ಮ, ಖಾಜಾಬಿ, ನಾಗಮ್ಮ ಗೌಡ್ರು, ನೀಲಮ್ಮ ಮರಿಯಪ್ಪ ಹುಲ್ತಿಗಪ್ಪ, ಸೇರಿದಂತೆ ನೂರಾರು ರೈತರಿದ್ದರು.

# ನುಗುಡೋಣಿ- ಎನ್ ಹೊಸೂರು ಸಂಪರ್ಕಿಸುವ ಹಳ್ಳಕ್ಕೆ 2 ಕೋಟಿ ರೂ ವೆಚ್ಚದಲ್ಲಿ ಸೇತುವೆ ನಿರ್ಮಾಣ



ಧೈರ್ಯದ ದಾರಿ

**ರಾಯಚೂರು,ಡಿ.27**–ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲಕ್ಕಾಗಿ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಸೇತುವೆ ನಿರ್ಮಾಣ ಹಾಗೂ ಹರಿಯುವ ಹಳ್ಳಗಳಿಗೆ ಚೆಕ್ ಡ್ಯಾಮ್ ನಿರ್ಮಾಣ ಮಾಡುವ ಮೂಲಕ ಅಂತರ್ಜಲ ವೃದ್ಧಿಗಾಗಿ ಪ್ರಯತ್ನಿಸಲಾಗುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ತಿಳಿಸಿದರು.

ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರವಾರ ತಾಲೂಕಿನ ನುಗುಡೋಣಿಯಿಂದ ಎನ್ ಹೊಸೂರು ಸಂಪರ್ಕಿಸುವ ರಸ್ತೆಗೆ ಹರಿಯುವ ಹಳ್ಳಕ್ಕೆ 2 ಕೋಟಿ ರೂ ವೆಚ್ಚದಲ್ಲಿ ಸೇತುವೆ ನಿರ್ಮಾಣ ಕಾಮಗಾರಿಗೆ ಸಚಿವ ಎನ್ ಎಸ್ ಬೋಸರಾಜು ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪಯ್ಯ ನಾಯಕ ಅವರು ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಕೆರೆಗಳ ಸಂರಕ್ಷಣೆ ಮೂಲಕ ಅಂತರ್ಜಲ ವೃದ್ಧಿಗಾಗಿ ವೈಜ್ಞಾನಿಕ ಯೋಜನೆಗಳನ್ನು ರೂಪಿಸಿ ಜಿಲ್ಲೆಯಾದ್ಯಂತ ಕೆರೆ-ಕಟ್ಟೆಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ರೈತರು ನೀರಿಗಾಗಿ ಬಹಳ ಕಷ್ಟಪಡುತ್ತಿದ್ದಾರೆ. ಕೆಲವೆಡೆ ಕೃಷಿ ಚಟುವಟಿಕೆಗಳಿಗಾಗಿ ರೈತರು ಕೆರೆ ಹಾಗೂ ಹರಿಯುವ ಹಳ್ಳಗಳ ಮೇಲೆ ಅವಲಂಬಿತರಾಗಿದ್ದಾರೆ ಹಾಗಾಗಿ ಕೆರೆ-ಕಟ್ಟೆಗಳ ಸಂರಕ್ಷಣೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಚುಕ್ಕಿ ಚುಗಪ್ಪ ಸಾಹುಕಾರ್ ಶರಣಯ್ಯ ನಾಯಕ್ ಗುಡದಿನ್ನಿ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಕಿರಲಿಂಗಪ್ಪ, ಮಲ್ಲಿಕಾರ್ಜುನ ಮಲ್ಲಟ್, ಶಿವಪ್ಪ, ಶಿವಕುಮಾರ್ ಅನೇಕರು ಉಪಸ್ಥಿತರಿದ್ದರು.

# ಉತ್ತಮ್ ಗ್ರಾಮ್ ಉಪ ಕ್ರಮ ರೈತ ದಿನಾಚರಣೆ ಯಶಸ್ವಿ




**ಕೋಲಾರ,ಡಿ.27–** ವಿರೂಪಾಕ್ಷಿ ಗ್ರಾಮ, ಅವನಿ ಗ್ರಾಮ ಪಂಚಾಯತ್, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ಎಸ್.ಎಂ. ಸೆಹಗಲ್ ಫೌಂಡೇಶನ್ ವತಿಯಿಂದ, ವಿರೂಪಾಕ್ಷಿ ಗ್ರಾಮವು ಉತ್ತವ್ ಗ್ರಾಮ ಉಪಕ್ರಮ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಜಲ ಬಜೆಟಿಂಗ್ ಕಾರ್ಯಕ್ರಮ ಹಾಗೂ ರೈತರ ದಿನಾಚರಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಸತೀಶ್ ಅವರು ಸಮುದಾಯದ ಸಕ್ರಿಯ ಭಾಗವಹಿಸುವಿಕೆಯಿಂದ ಕಾರ್ಯಕ್ರಮವನ್ನು ಹಲವು ಹಂತಗಳಲ್ಲಿ ನಡೆಸಿದರು.ಗ್ರಾಮದ ನೀರಿನ ಮೂಲಗಳು, ದಿನನಿತ್ಯದ ನೀರಿನ ಬಳಕೆ ಹಾಗೂ ಋತುವಾರಿಯಾದ ನೀರಿನ ವ್ಯತ್ಯಾಸಗಳ ಕುರಿತು ಸಮೀಕ್ಷೆ ಮತ್ತು ಮಾಹಿತಿ ಸಂಗ್ರಹ ನಡೆಸಲಾಯಿತು.
ಜಲ ಸಂರಕ್ಷಣೆ ಹಾಗೂ ಜಲ ಬಜೆಟಿಂಗ್ ತಂತ್ರಗಳ ಕುರಿತು ತರಬೇತಿ ಮತ್ತು ಸಂವಾದಾತ್ಮಕ ಅಧಿವೇಶನಗಳನ್ನು ಆಯೋಜಿಸಲಾಯಿತು.

ಗ್ರಾಮದಲ್ಲಿ ನೀರಿನ ಪೂರೈಕೆ ಮತ್ತು ಬೇಡಿಕೆಯನ್ನು ಹೋಲಿಸಿ ಸಮಗ್ರ ಜಲ ಬಜೆಟ್ ವಿಶ್ಲೇಷಣೆ ನಡೆಸಲಾಯಿತು.
ಭವಿಷ್ಯದಲ್ಲಿ ನೀರಿನ ಸಮಸ್ಯೆಯನ್ನು ನಿಯಂತ್ರಿಸಲು ಮಳೆನೀರು ಸಂಗ್ರಹಣೆ, ಮಲಿನ ನೀರಿನ ಮರುಬಳಕೆ, ನಿಯಂತ್ರಿತ ನೀರಾವರಿ ಪದ್ಧತಿ ಹಾಗೂ ಇತರೆ ಜಲ ಸಂರಕ್ಷಣಾ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಲಾಯಿತು.

ಗ್ರಾಮಸಭೆಯಲ್ಲಿ ಮಹಿಳಾ ಗುಂಪುಗಳಿಗೆ ಗ್ರಾಮ ಪಂಚಾಯತ್‌ಗೆ ಅರ್ಜಿ ಸಲ್ಲಿಸಿ ಚೆಕ್ ಡ್ಯಾಂ ನಿರ್ಮಾಣ, ಸಮುದಾಯ ಮಳೆನೀರು ಸಂಗ್ರಹ ವ್ಯವಸ್ಥೆಗಳು ಹಾಗೂ ರೀಚಾರ್ಜ್ ಪಿಟ್‌ಗಳ ನಿರ್ಮಾಣ ಮಾಡುವಂತೆ ಮನವಿ ಮಾಡಲಾಯಿತು. ಇದರಿಂದ ಸ್ಥಳೀಯ ಸರ್ಕಾರದ ಮೂಲಕ ಜಲ ಸಂರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ನೀರಿನ ಸಮರ್ಪಕ ಬಳಕೆ ಸಾಧ್ಯವಾಗುತ್ತದೆ ಎಂದು ತಿಳಿಸಲಾಯಿತು.

ಈ ಜಲ ಬಜೆಟಿಂಗ್ ಕಾರ್ಯಕ್ರಮವು ಸಮುದಾಯಕ್ಕೆ ತಮ್ಮ ಜಲ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಬಗ್ಗೆ ಉತ್ತಮ ಅರಿವು ಮೂಡಿಸಿದೆ. ದೀರ್ಘಕಾಲಿಕ ಸ್ಥಿರತೆಗೆ ನಿರಂತರ ಪ್ರಯತ್ನಗಳು ಮತ್ತು ಅವಧಿಕ ಮೌಲ್ಯಮಾಪನ ಅಗತ್ಯವಿದೆ ಎಂದು ತಿಳಿಸಲಾಯಿತು. ಸಮೂಹ ಪ್ರಯತ್ನದಿಂದ ಅರ್ಥಪೂರ್ಣ ಜಲ ಸಂರಕ್ಷಣೆ ಮತ್ತು ಸಂಪನ್ಮೂಲಗಳ ಉತ್ತಮ ಬಳಕೆ ಸಾಧ್ಯವೆಂಬುದನ್ನು ಈ ಕಾರ್ಯಕ್ರಮ ಸ್ಪಷ್ಟಪಡಿಸಿದೆ.

ಇದೇ ಸಂದರ್ಭದಲ್ಲಿ ನಡೆದ ರೈತರ ದಿನಾಚರಣೆ ಕಾರ್ಯಕ್ರಮದಲ್ಲಿ ಭರತ್ ಅವರು ಮಣ್ಣಿನ ಗುಣಲಕ್ಷಣಗಳು ಮತ್ತು ಇಂದಿನ ಪರಿಸ್ಥಿತಿಯಲ್ಲಿ ಮಣ್ಣಿನ ಸ್ಥಿತಿ ಕುರಿತು ಮಾಹಿತಿ ನೀಡಿದರು. ನಾವು ಮಣ್ಣಿಗೆ ಸರಿಯಾದ ಪೋಷಕಾಂಶಗಳನ್ನು ನೀಡದೆ ಅದರ ಗುಣವನ್ನು ದಿನೇದಿನೇ ಕಳೆದುಕೊಳ್ಳುತ್ತಿದ್ದೇವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಮುಂದಿನ ಪೀಳಿಗೆಯ ಭವಿಷ್ಯಕ್ಕಾಗಿ ಸಾವಯವ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದು ಹೇಳಿದರು. ಜೊತೆಗೆ ವಿವಿಧ ಇಲಾಖೆಗಳ ಕೃಷಿ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಚಂದ್ರಪ್ಪ, ಮಹಿಳಾ ಎಫ್‌ಐಜಿ ಗುಂಪುಗಳ ಸದಸ್ಯರು, ಗ್ರಾಮಸ್ಥರು ಹಾಗೂ ಎಸ್.ಎಂ. ಸೆಹಗಲ್ ಫೌಂಡೇಶನ್ ಸಿಬ್ಬಂದಿಯಾದ ವಿಶ್ವ ಅವರು ಉಪಸ್ಥಿತರಿದ್ದರು

# ನಾಡಿನ ಉಳಿವಿಗೆ ಹೋರಾಡಿದವರನ್ನು ನೆನೆಯಬೇಕು



**ಮೈಸೂರು: ಡಿ.27:** ಕನ್ನಡ ನಾಡಿಗೆ ತನ್ನದೇ ಆದ ಹಿರಿಮೆಯಿದೆ. ಕನ್ನಡ ನಾಡಿನ ಉಳಿವಿಗೆ ಹೋರಾಡಿದವರನ್ನು ನೆನೆಯುವುದೇ ಕನ್ನಡ ರಾಜ್ಯೋತ್ಸವ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ನಗರದ ನಟರಾಜ ಸಭಾ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕನ್ನಡದ ಹಲವಾರು ಮಹನೀಯರ ಆದರ್ಶಗಳನ್ನು ಕನ್ನಡಿಗರು ಅಳವಡಿಸಿಕೊಳ್ಳಬೇಕು. ಆ ಮೂಲಕ ನಾಡು, ನುಡಿ, ಜಲ, ಕನ್ನಡಿಗರ ರಕ್ಷಣೆ ಮಾಡುವಂತಹ ಗುರಿಯನ್ನು ನಾವೆಲ್ಲರೂ ಸ್ವೀಕಾರ ಮಾಡಬೇಕಿದೆ ಎಂದರು.
2500 ವರ್ಷಗಳಿಗೂ ಹೆಚ್ಚಿನ ಇತಿಹಾಸವಿರುವ ಪ್ರಾಚೀನ ಭಾಷೆ ಕನ್ನಡ. ಪಂಪ, ಜನ್ನ, ರನ್ನರಿಂದ ಹಿಡಿದು, ಬೇಂದ್ರೆ, ಕುವೆಂಪು ಅವರವರೆಗೂ ಸಾವಿರಾರು ಸಾಹಿತಿಗಳು, ಹೋರಾಟಗಾರರು ಕನ್ನಡಕ್ಕಾಗಿ ದುಡಿದು ಸೇವೆ ಸಲ್ಲಿಸಿದ್ದಾರೆ. ಪ್ರಪಂಚದಲ್ಲಿ ಯಾವ ಭಾಷೆಗೂ ಇಲ್ಲದ ಶಕ್ತಿ ಕನ್ನಡಕ್ಕಿದೆ. ಕನ್ನಡಿಗರು ಯಾವಾಗಲೂ ವಿಶಾಲ ಹೃದಯವಂತರು. ಹೊರಗಿನವರು ಯಾರೇ ಬಂದರೂ ಮೊದಲು ಪ್ರೀತಿ, ವಿಶ್ವಾಸ ನೀಡುವ ಮನೋಭಾವ ನಮ್ಮಲ್ಲಿದೆ. ಅವರಿಗೆ ಬೇಕಾದ ಎಲ್ಲ ಸೌಲಭ್ಯ ಒದಗಿಸುತ್ತೇವೆ. ಆದರೆ, ಕನ್ನಡಿಗರು ಹೊರ ರಾಜ್ಯಗಳಿಗೆ ಹೋದ ಸಂದರ್ಭದಲ್ಲಿ ನಮ್ಮನ್ನು ತುಚ್ಚವಾಗಿ ಕಾಣುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ನಟರಾಜ ಶಿಕ್ಷಣ ಸಂಸ್ಥೆಗಳ ವಿಶೇಷಾಧಿಕಾರಿ ಪ್ರೊ .ಎಸ್. ಶಿವರಾಜಪ್ಪ ಮಾತನಾಡಿ, ಹೋರಾಟಗಾರರು ಇಲ್ಲವಾಗಿದ್ದರೆ, ಇಂದು ಕರ್ನಾಟಕದಲ್ಲಿ ನಾಡು, ನುಡಿಗೆ ಕುತ್ತು ಬರುತ್ತಿತ್ತು. ಹೋರಾಟಗಳು ನಡೆದರೂ ಸಹ ಇವತ್ತು ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಹೆಚ್ಚು ಮನ್ನಣೆ ದೊರಕದಂತಾಗಿರುವುದು ವಿಷಾದನೀಯ ಎಂದರು.
ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಸಮಾಜ ಸೇವಕರಾದ ಯಶಸ್ವಿ ಎಸ್.ಸೋಮಶೇಖರ್, ಜೈಶಂಕರ್, ಡಾ.ಎಂ.ಪುಟ್ಟಸ್ವಾಮಿ, ಯಶವಂತ್ ಅವರನ್ನು ಸನ್ಮಾನಿಸಲಾಯಿತು.

# ರಮೇಶ ಅವರಿಗೆ ಪಿಹೆಚ್.ಡಿ.

**ಕಲಬುರಗಿ,ಡಿ.27:**ಗುಲಬರ್ಗಾ ವಿಶ್ವವಿದ್ಯಾಲಯವು ಕಾನೂನು ವಿಷಯದಲ್ಲಿ ರಮೇಶ ಶರಣಪ್ಪ ಡೊಳ್ಳೆನವರು ಅವರಿಗೆ ಪಿಹೆಚ್.ಡಿ. ಪದವಿ ಪ್ರಕಟಿಸಿದೆ.



ಡಾ. ದೇವಿದಾಸ್ ಜಿ. ಮಾಲೆ ಇವರ ಮಾರ್ಗದರ್ಶನದಲ್ಲಿ “ಲೀಗಲ್ ಪರ್ಸಪೆಕ್ಟಿವ್ಸ್ ಆಫ್ ರಿಸರ್ವೇಶನ್ ಫಾರ್ ಶಡ್ಯೂಲ್ಡ್ ಕಾಸ್ಟ್ ಆಂಡ್ ಟ್ರೈಬ್ಸ್ ಇನ್ ಕರ್ನಾಟಕ” (LEGAL PERSPECTIVES OF RESERVATION FOR SCHEDULED CASTES AND TRIBES IN KARNATAKA”) ಕುರಿತು ರಮೇಶ ಶರಣಪ್ಪ ಡೊಳ್ಳೆನವರು ಅವರು ಪ್ರಬಂಧವನ್ನು ಮಂಡಿಸಿದ್ದರು.

# ಪ್ರವಚನಗಳು ಮಾನವೀಯ ಮೌಲ್ಯಗಳನ್ನು ಕಲಿಸುತ್ತವೆ

## ಶಾಸಕ :ಡಾ. ವಿಜಯಾನಂದ ಎಸ್ ಕಾಶಪ್ಪ




ಧೈರ್ಯದ ದಾರಿ

**ಇಲಕಲ್ಲ,ಡಿ.27–** ಇಂದು ದೇಶದಲ್ಲಿ ಮನುಜರು ಮಾನವೀಯತೆಯ ಮೌಲ್ಯಗಳನ್ನು ಮರೆತಿರುವುದರಿಂದ ನಾನಾ ರೀತಿಯ ಸಮಸ್ಯೆಗಳು ಈ ಸಮಾಜದಲ್ಲಿ ಎದುರಾಗುತ್ತಿವೆ. ಆದುದರಿಂದ ಇಂತಹ ಪ್ರವಚನಗಳು ಮಾನವೀಯ ಮೌಲ್ಯಗಳನ್ನು ಕಲಿಸುತ್ತವೆ ಎಂದು ಶಾಸಕ ಹಾಗೂ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿರುವ ಶ್ರೀ ಡಾ. ವಿಜಯಾನಂದ ಎಸ್ ಕಾಶಪ್ಪನವರ ಅಭಿಪ್ರಾಯ ವ್ಯಕ್ತಪಡಿಸಿದರು. ನಗರದ ವಿಜಯ ಮಹಾಂತೇಶ್ ಅನುಭವ ಮಂಟಪದಲ್ಲಿ ಜಮಾಅತೆ ಇಸ್ಲಾಮೀ ಹಿಂದ ಇಲಕಲ್ ವತಿಯಿಂದ ಕೆಡುಕು ಮುಕ್ತ ಸಮಾಜ ಎಂಬ ವಿಷಯದ ಮೇಲೆ ನೆರವೇರಿದ ಕನ್ನಡದಲ್ಲಿ ಸಾರ್ವಜನಿಕ ಕುರಾನ್ ಪ್ರವಚನವನದಲ್ಲಿ ಮುಖ್ಯ ಅತಿಥಿ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಅವರು ಎಲ್ಲಾ ಸಮುದಾಯದವರು ಕೂಡ ಇಂತಹ ಅರಿವು ಮೂಡಿಸುವ , ಕೆಡುಕುಗಳನ್ನು ನಿರ್ಮೂಲನೆ ಮಾಡುವಂತಹ ಪ್ರವಚನಗಳನ್ನು ಏರ್ಪಾಡು ಮಾಡುವುದು ಉತ್ತಮ. ಈ ದೇಶದಲ್ಲಿ
ಬಹಳಷ್ಟು ಸಂಘಟನೆಗಳು ಈ ದೇಶವನ್ನು ಒಡೆದು ಹಾಕುವ ಕೆಲಸ ಮಾಡುತ್ತಿವೆ ಅಂತಹವರ ವಿರುದ್ಧ ಎಲ್ಲಾ ಸಜ್ಜನರು ಧ್ವನಿಗೂಡಿಸುವ ಅವಶ್ಯಕತೆ ಇದೆ ಎಂದರು.

ನುಡಿದಂತೆ ನಡೆ ಇಲ್ಲದಿದ್ದರೆ ಇದೇ ಜೀವನ ಕಡೆ ಎಂಬ ಬಸವಣ್ಣನವರ ಮಾತನ್ನು ನೆನಪಿಸುತ್ತಾ ಕೇವಲ ಭಾಷಣ ಮತ್ತು ಪ್ರವಚನಗಳಿಗೆ ಸೀಮಿತವಾಗದೆ ನಮ್ಮ ಜೀವನದಲ್ಲಿಯೂ ಕೂಡ ಇದನ್ನು ಅಳವಳಿಸಿಕೊಂಡು ಮುಂದೆ ಸಾಗಬೇಕಾಗಿದ. ನಮ್ಮ ದೇಶ ಜಾತ್ಯತೀತತೆಯ ದೇಶ ಎಂಬ ಜಂಬ ಕೊಚ್ಚಿಕೊಳ್ಳದೆ ಹದಗೆಟ್ಟಿರುವ ಜಾತ್ಯಾತೀತತೆಯ ಕೆಳಭಾಗದಲ್ಲಿ ನಾವು ಕೆಲಸ ಮಾಡುವ ಅವಶ್ಯಕತೆ ಇದೆ ಎಂದರು.
ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಜನಾಬ ಲಾಲ ಹುಸೇನ್ ಕಂದಗಲ್ ರವರು ಮಾತನಾಡಿ ಸುಮಾರು 50 ವರ್ಷಗಳಿಂದ ನಗರದಲ್ಲಿ ತಮಾಅತೆ ಇಸ್ಲಾಮೀ ಹಿಂದ್ ತನ್ನ ಸೇವೆಯನ್ನು ತನ್ನ ಕರ್ತವ್ಯವೆಂದು ತಿಳಿದು ಹಗಲಿರುಳು ಶ್ರಮಿಸುತ್ತಾ ಬಂದಿದೆ , ದೇಶದಲ್ಲಿ ನೈಜ್ಯ ಮೌಲ್ಯದೆಡೆಗೆ ಸುಮಾರು 80 ವರ್ಷಗಳಿಂದ ಹಲವಾರು ವಿಭಾಗಗಳೊಂದಿಗೆ ವ್ಯವಸ್ಥಿತ ರೀತಿಯಲ್ಲಿ ಸಮಾಜ ಸುಧಾರಣಾ ಕಾರ್ಯಗಳನ್ನು ಮಾಡುತ್ತಾ ಬಂದಿದೆ . ಇದೇ ರೀತಿಯಾಗಿ ಮುಂದುವರೆದು ಮಾತನಾಡಿದ ಅವರು ಪ್ರೀತಿ ವಿಶ್ವಾಸದಿಂದ ಈ ಸಮಾಜ ಮುನ್ನಡೆಯಲಿ ಎಂದು ಈ ಪ್ರವಚನದ ಮೂಲ ಉದ್ದೇಶವಾಗಿದೆ , ಇದು ಕೇವಲ ಮುಸ್ಲಿಮರ ಕಾರ್ಯಕ್ರಮವಲ್ಲದೆ ಇದು ಇಳಕಲ್ ನಗರದ ಕಾರ್ಯಕ್ರಮವಾಗಿದೆ ಎಂದರು.

ಮುಖ್ಯ ಪ್ರವಚನಕಾರರಾದ ನಾಡಿನ ಖ್ಯಾತ ವಾಗ್ಮಿಗಳು ಹಾಗೂ ಶಾಂತಿ ಪ್ರಕಾಶನದ ವ್ಯವಸ್ಥಾಪಕರಾಗಿರುವ ಜನಾಬ ಮುಹಮ್ಮದ್ ಕುಂಣಟಿಜಜಜಿಟಿಜಜ ರವರು ಕೆಡಕು ಮುಕ್ತ ಸಮಾಜ ಎಂಬ ವಿಷಯದ ತಮ್ಮ ಪ್ರವಚನದಲ್ಲಿ ಅಜ್ಞಾನ ಎಂಬುದು ಕತ್ತಲು, ಈ ಅಜ್ಞಾನದ ವಿರುದ್ಧ ಧರ್ಮಗಳ ಬೆಳಕು ಹಾಗೂ ಹೆಚ್ಚು ಹೆಚ್ಚು ಅರಿವು ಮೂಡಿಸುವ ಪ್ರಯತ್ನಗಳನ್ನು ನಮ್ಮದಾಗಿಸಬೇಕು ಎಂದರು. ಮನುಷ್ಯರ ಮಧ್ಯೆ ನಿರಂತರ ಅಂತರ ಹೆಚ್ಚಾಗುತ್ತಿದೆ ಮನುಷ್ಯನ ಸುತ್ತ ಇಂದು ಭಯದ ವಾತಾವರಣ ಸೃಷ್ಟಿಯಾಗಿದೆ ಇದೇ ವರ್ಷದಲ್ಲಿ ದೇಶದ 2079 ವಿದ್ಯಾರ್ಥಿಗಳು ಭಯದಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ನೆನಪಿಸುತ್ತಾ ಮಾತನಾಡಿದ ಅವರು ಪ್ರವಾದಿಗಳು ಈ ಜಗತ್ತಿನಲ್ಲಿ ಹೆದರಿಸಲು ಬಂದವರಲ್ಲ ಬದಲಾಗಿ ಪ್ರೀತಿಯಿಂದ ಹಾಗೂ ನೆಮ್ಮದಿಯೊಂದಿಗೆ ನಿರ್ಭಯವಾಗಿ ಬದುಕುವ ದಾರಿಯನ್ನು ಸಮಾಜಕ್ಕೆ ತೋರಿಸಲು ಬಂದವರು , ದೇವರಿಂದ ಜನರ ಮಾರ್ಗದರ್ಶನಕ್ಕಾಗಿ ಕುರಾನ್ ಅವತೀರ್ಣಗೊಂಡಿದೆ ಇದೇ ಕುರಾನಿನ 13 ಕಡೆಯಲ್ಲಿ ಭಯವಿಲ್ಲದೆ ಬದುಕುವ ದಾರಿ ತೋರಿಸಿ , ಜನರನ್ನು ಭಯದಿಂದ ಹೊರ ತೆಗೆದು ಎಲ್ಲಾ ಕೆಡುಕುಗಳ ವಿರುದ್ಧ ಬದುಕುವ ಉದ್ದೇಶ ತೋರಿಸಿ ಕೊಡುವ ಹಲವಾರು ನಿದರ್ಶನಗಳಿವೆ . ಮನುಷ್ಯರನ್ನು ಬೇರ್ಪಡಿಸುವ ಒಂದು ಅಂಶವು ಕುರಾನಿನಲ್ಲಿ ಸಿಗುವುದಿಲ್ಲ ಎಲ್ಲಾ ಮನುಷ್ಯರ ಹೃದಯಗಳನ್ನು ಜೋಡಿಸುವ ಗ್ರಂಥ ಇದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಒಬ್ಬ ಮನುಷ್ಯನನ್ನು ಕೊಂದರೆ ಇಡೀ ಮಾನವ ಕುಲವನ್ನೇ ಕೊಂದಹಾಗೆ ಎಂದು ಎಚ್ಚರಿಸುವ ತತ್ವಗಳು ಕುರಾನಿನಲ್ಲಿ ಸಿಗುತ್ತವೆ ಒಂದು ಜೀವವನ್ನು ಉಳಿಸಿದರೆ ಇಡೀ ಮಾನವ ಕುಲವನ್ನೇ ಉಳಿಸಿದಂತೆ ಎಂದು ಈ ಗ್ರಂಥ ಸಾರುತ್ತದೆ. ಸಹೋದರ ಸಹೋದರರ ಮಧ್ಯೆ ಭಿನ್ನಾಭಿಪ್ರಾಯಗಳು ಇರಕೂಡದು ನಿಮ್ಮ ಸಹೋದರರ ಮುಖವನ್ನು ನೋಡಿದಾಗ ನಿಮ್ಮ ಮುಖದಲ್ಲಿ ಹರ್ಷೋದ್ಗಾರವನ್ನು ತರಬೇಕು , ಈ ಕಾಲ ಚಿನ್ನಕ್ಕೂ ತುಕ್ಕು ಹಿಡಿಯುವ ಕಾಲ, ಎಲ್ಲರೂ ಕೆಟ್ಟು ಹೋಗುತ್ತಿರುವ ಕಾಲ. ಪುರುಷರು ಮತ್ತು ಮಹಿಳೆಯರು ಎನ್ನದೆ ಯುವಕರು ಮತ್ತು ವೃದ್ಧರು ಎನ್ನದೆ ಎಲ್ಲರೂ ಕೆಡುಕುಗಳಲ್ಲಿ ತಲ್ಲೀನ ರಾಗಿರುವ ಕಾಲ ಇಂತಹ ಕಾಲದಲ್ಲಿ ಮನುಷ್ಯರ ಮನಸ್ಸುಗಳು ಮಾಲಿನ್ಯವಾಗಿವೆ . ಮನುಷ್ಯ ಮನುಷರ ಮಧ್ಯ ಪೈಶಾಚಿಕ ಕೃತ್ಯಗಳು ನಡೆಸುವವರು ಮನುಷ್ಯರಲ್ಲ ಬದಲಾಗಿ ಪಿಶಾಚಿಗಳು ಎಂದರು.
ಕಲ್ಚರಲ್ ಲಿಬರಲಿಸಂ ನ ಕಾಲ ಇದು ಎಂದು ಮಾತನಾಡಿದ ಅವರು ಹಿಂದೆ ಈ ಸಮಾಜ ಕೆಟ್ಟವರನ್ನು ಸಮಾಜದ ಆಚೆ ಇಡುತ್ತಿತ್ತು ಆದರೆ ಇಂದು ಇದೇ ಕೆಟ್ಟ ಜನರನ್ನು ನಮ್ಮ ನಾಯಕರನ್ನಾಗಿ ಮಾಡುತ್ತಿರುವಂತಹದ್ದು ಬಹಳ ದುಃಖದ ಸಂಗತಿ. ಸಮಸ್ಯೆಗಳನ್ನು ಸೃಷ್ಟಿಸುತ್ತಿರುವವರು ಇಂದು ನಾಯಕರುಗಳಾಗಿ ಮಾರ್ಪಡುತ್ತಿದ್ದಾರೆ , ಅತ್ಯಾಚಾರಿಗಳನ್ನು ಸ್ವಾಗತಿಸುವ ಸಮಾಜವನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅಶ್ಲೀಲತೆಯನ್ನು ಅನೈತಿಕತೆಯನ್ನು ಬಹಳ ಸರಳವಾಗಿ ತೆಗೆದುಕೊಳ್ಳುತ್ತೇವೆ ಇದರ ವಿರುದ್ಧ ನಮ್ಮ ನಿಯಮಗಳು ರೂಪಿಸುವ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಬದುಕಿಗೆ ನಿಯಮಗಳು ನೀತಿಗಳು ಬೇಕಾಗಿದೆ ಇವೆಲ್ಲವೂ ಧರ್ಮಗಳು ಕಲಿಸಿಕೊಡುತ್ತವೆ. ಪರಸ್ಪರರ ಮಧ್ಯೆ ಅಸೂಹೆ ಆತ್ಮಹತ್ಯೆಗೆ ನಾಂದಿ ಹಾಡುತ್ತಿವೆ ಇವೆಲ್ಲವನ್ನೂ ನೋಡಿಕೊಂಡು ಸುಮ್ಮನಿದ್ದರೆ ಮುಂದಿನ ತಲೆಮಾರುಗಳಿಗೆ ಇದು ಘಾತಕವಾಗಿ ಮಾರ್ಪಡುತ್ತದೆ ಎಂದರು.

ಈ ಕಾರ್ಯಕ್ರಮದ ದಿವ್ಯಸಾನಿಧ್ಯ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಅಖಿಲ ಭಾರತ ದೇವಾಂಗ ಗುರುಗಳಾದ ಹಾಗೂ ಶ್ರೀ ಗಾಯತ್ರಿ ಪೀಠ ಮಹಾ ಸಂಸ್ಥಾನ ಹೇಮ ಕೂಟ ಹಂಪಿ ಇದರ ಪೀಠಾಧಿಪತಿಗಳಾದ ಶ್ರೀ ಶ್ರೀ ದಯಾನಂದ ಪುರಿ ಮಹಾಸ್ವಾಮಿಗಳು ಮಾತನಾಡಿ ಈ ಜಗತ್ತಿನಲ್ಲಿ ಯಾರೂ ಕೂಡ ಜಾತಿಯಲ್ಲಿ ಅಥವಾ ಈ ಧರ್ಮದಲ್ಲಿ ಹುಟ್ಟಿಸು ಎಂದು ದೇವರಲ್ಲು ಬೇಡಿ ಬಂದವರಲ್ಲ ಭೂಮಿಗೆ ಬರಬೇಕಾದರೆ ನಾವು ಏನನ್ನು ಪಡೆದುಕೊಂಡು ಬಂದವರಲ್ಲ ಹೋಗುವಾಗವೂ ಕೂಡ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ ಪಡೆದುಕೊಂಡು ಹೋಗುವುದು ಯಾವುದಾದರೂ ಇದ್ದರೆ ಅದು ನಮ್ಮ ಪುಣ್ಯ ಕರ್ಮಗಳು. ಪ್ರವಾದಿಗಳು ಶರಣರು ದಾಸಿಮಯ್ಯನವರು ಹೇಳಿದಂತೆ ಇಳೆ ನಿಮ್ಮ ದಾನ ಬೆಳೆ ನಿಮ್ಮದಾನ ಸುಳಿದು ಬೀಸುವ ಗಾಳಿ ಅದು ನಿಮ್ಮದಾನ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ ಎಂಬ ವಚನದ ಸಾಲದಲ್ಲಿ ನಮ್ಮ ಜೀವನವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ ಪ್ರಾಣಿಗಳಿಗಿಂತ ಮನುಷ್ಯನಿಗೆ ಒಂದು ಯೋಚನಾ ಶಕ್ತಿಯನ್ನು ದೇವನು ನೀಡಿದ್ದಾನೆ ಈ ಯೋಚನಾ ಶಕ್ತಿ ಧರ್ಮಗಳಿಂದ ಕಲಿಯಬೇಕಾಗುತ್ತದೆ ಬೆಳಕಿನೆಡೆಗೆ ಕರೆಯುವ ಸಾಧನವನ್ನು ಧರ್ಮ ಎಂದು ಕರೆಯುತ್ತೇವೆ ಎಂದು ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷೀಯ ಸ್ಥಾನವನ್ನು ಅಲಂಕರಿಸಿ ಮಾತನಾಡಿದ ಜಮಾಅತೆ ಇಸ್ಲಾಮಿ ಹಿಂದ್ ಘಟಕದ ರಾಜ್ಯಾಧ್ಯಕ್ಷರಾದ ಡಾ" ಸಾದ್ ಬೆಳಗಾಮಿ ರವರು ಮಾತನಾಡಿ ಇಂದು ನಮ್ಮಲ್ಲಿ ಮಾನವೀಯತೆ ಕುಸಿಯುತ್ತಿದೆ ಭಿನ್ನಾಭಿಪ್ರಾಯಗಳು ಕೆಡುಕುಗಳು ವ್ಯಾಪಕವಾಗಿ ನಡೆಯುತ್ತಿವೆ ಭ್ರಷ್ಟಾಚಾರ ವಿಚಾರ ಅತ್ಯಾಚಾರಗಳಂತಹ ರೋಗಗಳಲ್ಲಿ ಸಮಾಜ ಸಿಲುಕುತ್ತಿದೆ , ಈ ಜಗತ್ತಿನಲ್ಲಿ ದೇವನು ನಮಗೆ ಸ್ವತಂತ್ರವಾಗಿ ಬಿಟ್ಟಿದ್ದಾನೆ ಇಂತಹದರಲ್ಲಿ ನಮ್ಮ ಜೀವನದ ಉದ್ದೇಶವನ್ನು ಅರಿತು ನಮ್ಮ ಸೃಷ್ಟಿಕರ್ತನನ್ನು ಅರಿತು ಬದುಕು ಕೊಟ್ಟಿಕೊಳ್ಳಬೇಕಾಗಿದೆ. ಒಳಿತನ್ನು ಸ್ಥಾಪಿಸಲು ಕೆಡಕನ್ನು ನಿರ್ಮೂಲನೆ ಮಾಡುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದ ಅವರು ಕೆಡುಕನ್ನು ಪಸರಿಸಲಿಕ್ಕೆ ಆದ್ಯತೆಯನ್ನು ನೀಡಬಾರದು ಒಳಿತನ್ನು ಸಾಧಿಸುವ ಪ್ರಯತ್ನಗಳು ಸದಾ ಮಾಡುತ್ತಾ ಸಾಗಬೇಕು ಎಂದು ನುಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ವಿ.ಮ.ವಿದ್ಯಾವರ್ಧಕ ಸಂಘ ಇಲಕಲ್ ಇದರ ವಾಯ್ಸ್ ಚೇರ್ಮನ್ ರಾಗಿರುವ ಶ್ರೀ ಅರುಣ್ ಎ ಬಿಜ್ಜಲ , ಜಮಾಅತೆ ಇಸ್ಲಾಮೀ ಹಿಂದ ನ ಸ್ಥಾನೀಯ ಅಧ್ಯಕ್ಷರಾದ ಜನಾಬ ಹುಸೇನ ಬಾಶಾ ಸುಳಿಭಾವಿ , ಗಣ್ಯರಾದ ಶ್ರೀ ಶಾಂತಕುಮಾರ್ ಸುರಪುರ ಶ್ರೀ ರಾಜು ಬೋರ , ಶ್ರೀ ಮುನಿಸ್ವಾಮಿ ದೇವಾಂಗಮಠ , ಶ್ರೀ ನಾಗಪ್ಪ ಕನ್ನೂರ , ಶ್ರೀ ಚನ್ನಪ್ಪ ಗೌಡ ನಾಡಗೌಡರು , ಶ್ರೀ ವಿಜಯ ಮಹಾಂತೇಶ್ ಗದ್ದನಕೇರಿ , ಪ್ರೊಫೆಸರ್ ಶಿವಾನಂದ , ಶ್ರೀ ರವೀಂದ್ರ ಕಲಬುರ್ಗಿ , ಶ್ರೀ ಸಂತೋಷ್ ಬನ್ನಟ್ಟಿ , ಶ್ರೀ ಸಂತೋಷ್ ಬಸವರಾಜ ಐಹೊಳಿ , ಶ್ರೀ ಶರಣಬಸಪ್ಪ ಆಜೂರ , ಶ್ರೀನಿವಾಸ್ ಜಾಧವ , ಶ್ರೀ ವಿಶ್ವನಾಥ ವಿ ಪಾಟೀಲ , ಶ್ರೀ ಹನುಮಂತಪ್ಪ ರಾಥೋಡ , ಶ್ರೀ ಸುರೇಶ್ ಜಂಗಲಿ , ಶ್ರೀ ಮಹಾಂತೇಶ್ ಹನಮನಾಳ , ಡಾ"ಪವನಕುಮಾರ ದರಕ , ಶ್ರೀ ಮಹಾಂತೇಶ ಹನುಮನಾಳ , ಜನಾಬ ಹುಸೇನಸಾಬ ಬಾಗವಾನ , ಜನಾಬ್ ಮೊಹಮ್ಮದ್ ಭಾವಿಕಟ್ಟಿ , ಶ್ರೀ ವೆಂಕಟೇಶ ರಾಥೋಡ , ಶ್ರೀ ಮೌಲಪ್ಪ ಬಂಡಿ ವಡ್ಡರ , ಜನಾಬ್ ಮೊಹಮ್ಮದ್ ಗೌಸ್ ನದಾಫ್, ಜನಾಬ ಸೈಯದ್ ಬಹಾವುದ್ದೀನ್ ಖಾಜಿ , ಜನಾಬ್ ಕಾಸಿಮಸಾಬ ವಂಟಿ , ಶ್ರೀ ಎಲ್ಲಪ್ಪ ಪೂಜಾರಿ ಶ್ರೀ ಎಂ ಬಿ ದೇಶಪಾಂಡೆ , ಶ್ರೀ ಮಹಾಂತೇಶ ಕಡಿವಾಲ, ಮೌಲಾನ ಮುಫ್ತಿ ಹಸನ್ ಶಾಹಿ , ಜನಾಬ ಮೊಹಮ್ಮದ್ ಆಸಿಫ್ ಬಿಳೇಕುದುರಿ , ಮೌಲಾನ ಮೊಹಮ್ಮದ್ ಹುಸೇನ್ ರಶಾದಿ, ಜನಾಬ ಮೊಹಮ್ಮದ್ ರಫೀಕ್ ಮುದಗಲ್ , ಜನಾಬ ರಾಜು ಏನ್ ಬನ್ನಿಗೋಳ , ಜನಾಬ ಸುಈದ್ ಅಹಮದ್ ಕೋತ್ವಾಲ್ , ಶ್ರೀ ನಾಗರಾಜ್ ಮದಿಕೇರಿ , ಜನಾಬ ಅಬ್ದುಲ್ ರಜಾಕ್ ಹಳ್ಳಿ , ಜನಾಬ ಮೆಹಬೂಬಸಾಬ ಆರಿ , ಶ್ರೀ ಅಶೋಕ ಗಂಜಿಹಾಳ , ಶ್ರೀ ನೀಲಪ್ಪ ಡೊಳ್ಳಿ, ಜನಾಬ್ ಪರ್ವೇಜ್ ಕಾಜಿ , ಜನಾಬ ಅಬೂಬಕರ್ ಎಲ್ ಬೇಪಾರಿ, ಜನಾಬ ಮೊಹಮ್ಮದ್ ರಫೀಕ್ ಚಿತ್ತರಗಿ, ಶ್ರೀಮತಿ ಶರಣಮ್ಮ ತಳವಾರ್, ಡಾ" ಸಿ ತಿ ಮಾ ವಜ್ಜಲ , ಶ್ರೀಮತಿ ಸರಸ್ವತಿ ಈಟಿ , ಶ್ರೀಮತಿ ಮಂಜುಳಾ ಗರಡಿಮನಿ , ಶ್ರೀಮತಿ ವಿದ್ಯಾ ದಿನ್ನಿ , ಶ್ರೀಮತಿ ವೈಶಾಲಿ ಘಂಟಿ , ಶ್ರೀಮತಿ ಸುಮಿತ್ರ ರಜಪೂತ ಹಾಗೂ ಸಹಸ್ರಾರು ಸಂಖ್ಯೆಯಲ್ಲಿ ಸಹೋದರ ಸಹೋದರಿಯರು ಉಪಸ್ಥಿತರಿದ್ದರು

ಮೊಹಮ್ಮದ್ ಸಿರಾಜುದ್ದೀನ್ ಹುಮನಾಬಾದ್ ಕುರಾನ್ ಪಠಿಸಿದರು ಶ್ರೀ ಸಂಗಣ್ಣ ಗದ್ದಿ ಪ್ರವಚನ ಸ್ವಾಗತ ಸಮಿತಿಯ ಸದಸ್ಯರು ಸ್ವಾಗತ ಭಾಷಣ ಮಾಡಿದರು , ಜನಾಬ ಮೆಹಬೂಬ್ ಹುಸೇನ್ ಗಬ್ಬೂರ ಹಾಗೂ ಅಬ್ದುಲ್ ಗಫ್ಹಾರ್ ತಹಶೀಲ್ದಾರ್ ರವರು ನಿರೂಪಿಸಿದರು ಜನಾಬ ಮಹಮ್ಮದ್ ಹುಸೇನ್ ಬಾಗವಾನ್ ರವರು ವಂದಿಸಿದರು.

# ಅರಣ್ಯ ಇಲಾಖೆ ಅಧಿಕಾರಿಗಳು– ರೈತರ ನಡುವೆ ಜಟಾಪಟಿ



**ಕೋಲಾರ,ಡಿ.27–**ಕೋಲಾರ ತಾಲೂಕಿನ ಹರಟಿ ಗ್ರಾಮದ ಸರ್ವೆ ನಂಬರ್ 31 ರಲ್ಲಿ ಇಂದು ರೈತರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ಸ್ವಚ್ಛ ಮಾಡುವ ಸಂದರ್ಭದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಏಕಾಏಕಿ ರೈತರ ಮೇಲೆ ದೌರ್ಜನ್ಯಕ್ಕೆ ಮುಂದಾಗ ರೈತರು ನಿಮ್ಮ ದಾಖಲೆಗಳನ್ನು ತೋರಿಸಿ ಎಂದು ಹೇಳಲಾಗಿ ನಿಮಗೆ ಯಾವ ದಾಖಲೆಗಳು ತೋರಿಸುವ ಅವಶ್ಯಕತೆಯಿಲ್ಲ ಎಂದಾಗ ಇಬ್ಬರ ನಡುವೆ ವಾಗ್ವಾಳಿ ನಡೆಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ್ಯ ರೈತ ಸಂಘ ಮತ್ತು ಕಾರ್ಮಿಕ ಹಿತ ರಕ್ಷಣಾ ಸಮಿತಿಯ ಜಿಲ್ಲಾಧ್ಯಕ್ಷ ಆರ್ ಶ್ರೀನಿವಾಸನ್ ಅಧಿಕಾರಿಗಳನ್ನು ಪ್ರಶ್ನಿಸಿ ನಮ್ಮ ಜಮೀನುಗಳನ್ನು ದೌರ್ಜನ್ಯದಿಂದ ದಿನಾಂಕ 26–3–2025 ರಂದು ಏಕಾಏಕಿ ರೈತರಿಗೆ ಯಾವುದೇ ಮುನ್ಸೂಚನೆ ನೀಡದೆ ಕೋಟ್ಯಾಂತರರು ಬೆಳೆಗಳನ್ನು ನೀರಾವರಿಯನ್ನು ನಾಶಪಡಿಸಿದ್ದೀರಿ ಯಾವ ಆಧಾರದ ಮೇಲೆ ನೀವು ನೋಟಿಸ್ ನೀಡಿದ್ದೀರಾ ? ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿ ಎಂದಾಗ ನಾವು ನಿಮಗೆ ತೋರಿಸುವ ಅಗತ್ಯವಿಲ್ಲವೆಂದು ಉದ್ಧಟತನದಿಂದ ವರ್ತಿಸಿರುತ್ತಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಮಾತನಾಡುತ್ತಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಒಕ್ಕೊರಲಿನಿಂದ ಯಾವುದೇ ರೈತರ ಭೂಮಿಗಳಲ್ಲಿ ಅತಿಕ್ರಮ ಪ್ರವೇಶ ಮಾಡಬಾರದು ಅವರ ಬೆಳೆಗಳನ್ನು ನಾಶ ಮಾಡಬಾರದು ಒಟ್ಟಾರೆಯಾಗಿ ಒಕ್ಕಲೆಬ್ಬಿಸಬಾರದು ಎಂಬ ತೀರ್ಮಾನವನ್ನು ಕೆಡಿಪಿ ಸಭೆಯಲ್ಲಿ ತೀರ್ಮಾನ ತೆಗೆದು ಕೊಳ್ಳಲಾಯಿತು ಹಾಗೆಯೇ ಸರ್ಕಾರವು 2015 ರಲ್ಲಿ 3 ಎಕರೆಗಿಂತ ಕಡಿಮೆ ಇರುವ ಯಾವುದೇ ರೈತರ ಜಮೀನುಗಳನ್ನು ಒಕ್ಕಲೆಬ್ಬಿಸ ಬಾರದು ಎಂಬ ಆದೇಶವಿದ್ದರೂ ಸಹ ತಾವು ಇಂತಹ ಜಮೀನುಗಳನ್ನೇ ತಾವು ಒಕ್ಕಲೆಬ್ಬಿಸಿ ಸರ್ವನಾಶ ಮಾಡಿದ್ದೀರಿ, ಸರ್ಕಾರದ ಆದೇಶಗಳು, ಸುತ್ತೋಲೆಗಳು, ಜನಪ್ರತಿನಿಧಿಗಳ ಆದೇಶಗಳನ್ನು ತಾವು ಪಾಲಿಸದೆ ಈ ಅನರ್ಥಕ್ಕೆ ಕಾರಣರಾಗಿದ್ದೀರಿ ಎಂದು ದೂರಲಾಯಿತು.

ಎಸ್‌ಐಟಿ ಬಗ್ಗೆ ಮಾತನಾಡುತ್ತಾ ಇದು ಪೂರ್ಣ ಪ್ರಮಾಣದಲ್ಲಿ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ ಕಂದಾಯ ಇಲಾಖೆ ಮಂಜೂರು ಮಾಡಿದ್ದರೆ ಅವುಗಳನ್ನು ಗುರುತಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು ಅಷ್ಟೇ ಆದರೆ ಕೋಲಾರ ತಾಲೂಕು ಹುತ್ತೂರು ಹೋಬಳಿ ಶಿಳ್ಳೆಂಗೆರೆ, ಹರಟಿ ಮಲ್ಲಂಡಳ್ಳಿ, ಕೋಟಿಗಾನಹಳ್ಳಿ, ಅಬ್ಬಿಣಿ, ಅರಳಕುಂಟೆ ಗ್ರಾಮಗಳು ಕಂದಾಯ ಇಲಾಖೆಯ ಗೋಮಾಳ ಎಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಲಾಯಿತು ಇದು ಎಸ್‌ಐಟಿಗೆ ಬರುವುದಿಲ್ಲ ಈಗಾಗಲೇ ಜಂಟಿ ಸರ್ವೆ ಮುಗಿದಿದ್ದು 1941 ಆದೇಶದಂತೆ ಸೆಟ್ಲಮೆಂಟ್ ಆದೇಶದ ಪ್ರಕಾರ ಈ ಮೇಲ್ಕಂಡ ಗ್ರಾಮಗಳ ಯಾವುದೇ ಜಮೀನುಗಳು ಅರಣ್ಯ ಇಲಾಖೆಗೆ ಸಂಬಂಧವಿಲ್ಲ, ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳು ರೈತರ ಪರವಾಗಿರುವುದರಿಂದ ಅರಣ್ಯ ಇಲಾಖೆಯವರು ಅನಾವಶ್ಯಕವಾಗಿ ತೊಂದರೆ ನೀಡಬಾರದು ಎಂದು ಮನವಿ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಸಹ ಬಂದು ರೈತರ ವೇದನೆಯನ್ನು ಆಲಿಸಿ ಅರಣ್ಯ ಇಲಾಖೆಯವರನ್ನು ಕರೆದುಕೊಂಡು ಹೊರಟರು ಯಾವುದೇ ಅಹಿತಕರ ಘಟನೆಗೆ ಆಸ್ಪದ ಇರಲಿಲ್ಲ ದಾಖಲೆಗಳನ್ನು ಕೇಳುವುದರಲ್ಲಿ ಇತ್ತು ಹೊರತಾಗಿ ಯಾವೂದೇ ರೀತಿ ಔದರ್ಯತೆ ತೋರಿಸುವುದಲ್ಲಿ ಇರಲಿಲ್ಲ.
ಈ ಸಂದರ್ಭದಲ್ಲಿ ಬಟ್ರಳ್ಳಿ ಮಂಜುನಾಥ್, ಶ್ರೀನಿವಾಸ್, ಆನಂದ್, ವೆಂಕಟಸ್ವಾಮಿ, ವೆಂಕಟರಮಣಪ್ಪ, ಸುನಂದಮ್ಮ, ಜಯಶೀಲ, ಹನುಮಕ್ಕ, ಗೋಪಾಲಪ್ಪ, ಕಿರಣ್, ಪ್ರಬಲ್ ಮುಂತಾದವರು ಉಪಸ್ಥಿತರಿದ್ದರು.

# ಜ.17 ಜಲಾಗ್ರಹ ಸಮಾವೇಶ:ಮಾಲೂರಿಂದ ಹೋರಾಟ



**ಕೋಲಾರ,ಡಿ,27–** ಶಾಶ್ವತ ನೀರಾವರಿ ಹೋರಾಟ ಸಮಿತಿಯಿಂದ ಕೃಷ್ಣ ನದಿ ನೀರಿನಲ್ಲಿ ನಮ್ಮ ಪಾಲಿನ ನೀರನ್ನು ಹರಿಸಲು ಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕೆ ತರುವಂತೆ ಒತ್ತಾಯಿಸಲು ಜಲಾಗ್ರಹ ಸಮಾವೇಶವನ್ನು ನಗರದ ಪ್ರಭಾತ್ ಚಿತ್ರಮಂದಿರ ಸಮೀಪದ ಪುಡ್ ಕೋರ್ಟ್ ರಸ್ತೆಯಲ್ಲಿ ಜನವರಿ 17 ರಂದು ಹಮ್ಮಿ ಕೊಂಡಿದ್ದು ಈ ಸಂಬಂಧವಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನೀರಾವರಿ ಹೋರಾಟಗಾರರನ್ನು ಸಂಘಟಿಸಲು ಡಿ.31 ರಂದು ಮಾಲೂರು ಮೂಲಕ ಪ್ರಾರಂಭಿಸಲಾಗುವುದು ಎಂದು ಸಮಿತಿಯ ಅಧ್ಯಕ್ಷ ಆಂಜನೇಯರೆಡ್ಡಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿನ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ ಈಗಾಗಲೇ ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಮಟ್ಟದ ಜಲಾಗ್ರಹ ಸಮಾವೇಶವು ಯಶಸ್ವಿಯಾಗಿದ್ದು ಅದೇ ರೀತಿ ಕೋಲಾರ ಜಿಲ್ಲಾ ಮಟ್ಟದ ಸಮಾವೇಶವನ್ನು ಜ,17ರಂದು ಆಯೋಜಿಸಿರುವುದಾಗಿ ಹೇಳಿದರು.
ಕಳೆದ 30 ವರ್ಷಗಳಿಂದ ಶಾಶ್ವತವಾದ ಕುಡಿಯುವ ನೀರಿಗಾಗಿ ವಿವಿಧ ಮಾದರಿಯಲ್ಲಿ ಹೋರಾಟಗಳನ್ನು ಮುಂದುವರೆಸುತ್ತಾ ಬರಲಾಗುತ್ತಿದೆ. ಅದರೆ ರಾಜ್ಯದ ಯಾವೂದೇ ಸರ್ಕಾರವು ಬಯಲು ಸೀಮೆ ಪ್ರದೇಶದ ಜಿಲ್ಲೆಗಳಿಗೆ ಶಾಶ್ವತವಾದ ನದಿ ನೀರಾವರಿ ಯೋಜನೆಯನ್ನು ರೂಪಿಸಿ ಕೊಡುವಲ್ಲಿ ವಿಫಲವಾಗಿದ್ದು ಈ ಭಾಗದ ಜನತೆ ಮೂಲಭೂತ ಸೌಲಭ್ಯಗಳಲ್ಲಿ ಪ್ರಮುಖವಾದ ಕುಡಿಯುವ ನೀರು ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದರು. ಸರ್ಕಾರವು ಅವೈಜ್ಞಾನಿಕವಾದ ಎತ್ತಿನ ಹೊಳೆ ಯೋಜನೆಯನ್ನು 30 ಸಾವಿರ ಕೋಟಿ ವೆಚ್ಚನಲ್ಲಿ ನಮ್ಮಗಳ ತೆರಿಗೆ ಹಣವನ್ನು ದುರ್ಬಳಿಸಿ ಕೊಂಡಿದೆ. ಅನೇಕ ನೀರಾವರಿ ತಜ್ಞರು ಎತ್ತಿನ ಹೊಳೆ ಯೋಜನೆಯ ನೀರನ್ನು ತರಲು ಅಸಾಧ್ಯವೆಂದರು ಸಹ ಗುತ್ತಿಗೆದಾರರನ್ನು ತೃಪ್ತಿ ಪಡೆಸಿ ತಾವು 3–4 ತಲೆಮಾರುಗಳಿಗೆ ಆಗುವಷ್ಟು ಲೊಟಿ ಮಾಡಿ ತೃಪ್ತಿಯಾಗಿದ್ದಾರೆ. ಅವರಿಗೆ ಸಾರ್ವಜನಿಕರ ಬಗ್ಗೆ ಯಾವೂದೇ ಕಾಳಜಿ ಇಲ್ಲದೆ ಕೇವಲ ನಾಟಕಗಳ ಮೂಲಕ ಪುಕ್ಕಟೆ ಪ್ರಚಾರ ಪಡೆದಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಅವಿಭಜಿತ ಜಿಲ್ಲೆಯಲ್ಲಿ ಪ್ಲೋರೈಡ್, ಕ್ಲೋರೈಡ್ ನೀರಿನಿಂದ ಹಲವಾರು ರೋಗಗಳಿಗೆ ತುತ್ತಾಗುತ್ತಿದ್ದರೂ ಸಹ ಒಂದು ಬೊಗಸೆ ನದಿ ನೀರನ್ನು ತರಾದೆ ಅವೈಜ್ಞಾನಿಕವ ತಮಗೆ ಲಾಭದಾಯಕವಾದ ಯೋಜನೆಗಳನ್ನು ಗುತ್ತಿಗೆದಾರರಿಗೆ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಹೊರತು ಜನಪ್ರತಿನಿಧಿಗಳಿಗೆ ಭವಿಷ್ಯದ ದೂರದೃಷ್ಠಿ ಕ್ಷೀಣಿಸಿದೆ. ಜನಪರವಾದ ಯಾವ ಬದ್ದತೆಯೂ ಇಲ್ಲವಾಗಿದೆ. ಕನಿಷ್ಠ ಮೂಲ ಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿಯೂ ವಿಫಲವಾಗಿದ್ದಾರೆ. ಇಂಥ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡಿರುವುದು ದುರಂತದ ಸಂಗತಿಯಾಗಿದೆ ಎಂದು ಕಿಡಿ ಕಾರಿದರು. ಪ್ರಸ್ತುತ ಕುಡಿಯುವ ನೀರಿನ ಗುಣಮಟ್ಟದಲ್ಲಿ ಯೂರನೀಯಂ ಅಂಶವು ಪತ್ತೆಯಾಗಿ ಅಪಾಯಕಾರಿ ಪರಿಸ್ಥಿತಿಯನ್ನು ತಲುಪಿದ್ದೇವೆ. ಇದರಿಂದ ಜನಜಾನುವಾರುಗಳಿಗೆ ದುಬಾರಿ ವೆಚ್ಚದ ಭಯಂಕರವಾದ ಕಾಯಿಲೆಗಳು ಬರುವ ಸೂಚನೆಗಳು ಕಂಡು ಬರುತ್ತಿದೆ ಎಂದು ಕಳವಳ ವ್ಯಕ್ತ ಪಡೆಸಿದರು.

ಈ ಎಲ್ಲಾ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದರು ಸಹ ನಮ್ಮ ಜಿಲ್ಲೆಯ ಪ್ರಜ್ಞಾವಂತರು ಮೌನದಿಂದ ಇರುವುದು ನೋವಿನ ಸಂಗತಿಯಾಗಿದೆ. ಈ ಹಿಂದೆ 30 ವರ್ಷಗಳಿಂದ ಹೋರಾಟ ಮಾಡಿದರೂ ಏನೊಂದು ಸಾಧನೆಯಾಗಲಿಲ್ಲ. ಇದೇ ರೀತಿ ಜನತೆ ನಿರ್ಲಕ್ಷದಿಂದ ಇದ್ದರೆ ಮುಂದೆ 30 ವರ್ಷಗಳಾದರೂ ಯಾವೂದೇ ಪ್ರಗತಿ ಕಾಣದೆ ಇದೇ ಬೆಂಗಳೂರಿನ ತ್ಯಾಜ್ಯ ನೀರು ಕುಡಿದು ಸಂಕಷ್ಟಗಳಿಗೆ ತುತ್ತಾಗ ಬೇಕಾದ ಭಯಂಕರ ಪರಿಸ್ಥಿತಿ ನಿರ್ಮಾಣವಾಗಲಿದೆ. ಕನಿಷ್ಟ ನಮ್ಮ ಮಕ್ಕಳಿಗಾದರೂ ಶುದ್ದ ನೀರು ದೊರಕಿಸಿ ಅವರ ಆರೋಗ್ಯದ ಸುರಕ್ಷತೆಗಾಗಿ ಕುಡಿಯುವ ನದಿ ನೀರನ್ನು ದೊರಕಿಸಿ ಕೊಡಲಾದರೂ ನಮ್ಮ ಜಲಾಗ್ರಹ ಹೋರಾಟದಲ್ಲಿ ಪ್ರತಿಯೊಂದು ಮನೆಯಿಂದಲೂ ಕೈ ಜೋಡಿಸ ಬೇಕಾಗಿದೆ ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಡಾ. ರಮೇಶ್, ಹೊಳಲಿ ಪ್ರಕಾಶ, ಅಬ್ಬಣಿ ಶಿವಪ್ಪ, ದಲಿತ ನಾರಾಯಣಸ್ವಾಮಿ, ಸಲಾವುದ್ದೀನ್ ಬಾಬು, ಸಂತೋಷ್, ರಾಜೇಶ್, ಚಂಬೇ ರಾಜೇಶ್ ಮಾತನಾಡಿ ತಮ್ಮ ಬೆಂಬಲವನ್ನು ವ್ಯಕ್ತ ಪಡೆಸಿ ಮಾತನಾಡಿದರು.
ಪತ್ರಿಗೋಷ್ಠಿಯಲ್ಲಿ ರೈತ ಸಂಘದ ರಾಮು ಶಿವಣ್ಣ, ನಿವೃತ್ತ ಡಿ.ವೈ.ಎಸ್.ಪಿ. ವೆಂಕಟಸ್ವಾಮಿ, ಪತ್ರಕರ್ತ ಸಿ.ವಿ.ನಾಗರಾಜ್, ಮುಂತಾದವರು ಉಪಸ್ಥಿತರಿದ್ದರು.

## ಎಚ್ಚರಿಕೆ ವಹಿಸಿ ವಿದ್ಯುತ್ ಅವಘಡ ತಪ್ಪಿಸಿ



**ಕೋಲಾರ,ಡಿ,27–** ವಿದ್ಯುತ್ ಅವಘಡದಿಂದ ಆಗುವ ಪ್ರಾಣ ಹಾನಿ ತಪ್ಪಿಸಲು ಮುಂಜಾಗ್ರತೆ ಮತ್ತು ವಿನಾಕಾರಣ ವಿದ್ಯುತ್ ಪೋಲಾಗುವುದನ್ನು ತಪ್ಪಿಸಲು ಜಾಗೃತಿವಹಿಸಿ ಪೋಷಕರಿಗೂ ಈ ಕುರಿತು ಅರಿವು ಮೂಡಿಸಿ ಎಂದು ಬೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರಾದ ಬಿ.ಎನ್.ಶುಭಾ ವಿದ್ಯಾರ್ಥಿಗಳಿಗೆ ಕರೆ ನೀಡಿದರು.
ನಗರದ ಕಠಾರಿಪಾಳ್ಯದ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ (ಬೆಸ್ಕಾಂ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಿಂದ ವಿದ್ಯುತ್ ಶಕ್ತಿಯ ಸುರಕ್ಷತೆ ಮತ್ತು ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ಸಂಬಂಧ ಅರಿವು ಮೂಡಿಸಲು ಶಾಲಾ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳಿಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ವಿದ್ಯುತ್ ಇಂದು ಅತಿ ಜೀವನಾ ವಶ್ಯಕವಾದ ಶಕ್ತಿಯ ಮೂಲವಾಗಿದೆ, ಕತ್ತಲು ಓಡಿಸಲು, ಅಡುಗೆ, ಬಿಸಿನೀರು, ಕೈಗಾರಿಕೆಗಳು ಸೇರಿದಂತೆ ಪ್ರತಿ ವಲಯದಲ್ಲೂ ವಿದ್ಯುತ್ ಅಗತ್ಯವಿದೆ, ವಿದ್ಯುತ್ ಶಕ್ತಿಯಿಲ್ಲದ ಜೀವನ ನೆನಪಿಸಿಕೊಳ್ಳಲು ಅಸಾಧ್ಯವಾದ ಪರಿಸ್ಥಿತಿಗೆ ಜನತೆ ಹೊಂದಿಕೊಂಡಿದ್ದಾರೆ ಎಂದರು.
ಈ ನಡುವೆ ವಿದ್ಯುತ್ ಬಳಕೆಯಲ್ಲಿನ ವ್ಯತ್ಯಾಸ, ಮುಂಜಾಗ್ರತೆ ವಹಿಸದಿರುವುದು, ನಿಯಮ ಬಾಹಿರ ಸಂಪರ್ಕ ಪಡೆಯುವುದು ಮತ್ತಿತರ ಕಾರಣಗಳಿಂದ ವಿದ್ಯುತ್ ಅವಘಡಗಳಾಗಿ ಸಾವು ನೋವುಗಳಾಗುವುದನ್ನು ಕಂಡಿದ್ದೇವೆ,,,, ಕೇಳಿದ್ದೇವೆ,,,, ಇಂತಹ ಘಟನೆಗಳನ್ನು ತಡೆದು, ವಿದ್ಯುತ್ ಅನ್ನು ಜೀವನ ಸ್ನೇಹಿಯಾಗಿ ಬಳಸಿಕೊಳ್ಳಲು ಮುಂಜಾಗ್ರತೆ ಅಗತ್ಯ ಎಂದರು.

ಸಹಾಯಕ ನಿರ್ವಾಹಕ ಇಂಜಿನಿಯರ್ ಸಿ.ಬಸವರಾಜ್ ಮಾತನಾಡಿ, ಪವರ್ ಮ್ಯಾನ್‌ಗಳ ಸುರಕ್ಷತೆಗೆ ಅನುಗುಣವಾಗಿ ವಿದ್ಯುತ್ ಮಾರ್ಗಗಳು, ವಿದ್ಯುತ್ ಪರಿವರ್ತಕಗಳು, ವಿದ್ಯುತ್ ಉಪಸ್ಥಾವರಗಳು, ಬಹುಮಹಡಿ ಕಟ್ಟಡಗಳು ಸೇರಿದಂತೆ ಎಲ್ಲ ವಿದ್ಯುತ್ ಸ್ಥಾವರಗಳಲ್ಲೂ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ನಮ್ಮ ಜೀವದ ಜೊತೆಗೆ ನಮ್ಮ ಕುಟುಂಬವು ನಮ್ಮ ಮೇಲೆ ಅವಲಂಬಿತವಾಗಿರುತ್ತದೆ. ಹೀಗಾಗಿ ಕೆಲಸದ ವೇಳೆ ಜೀವ ರಕ್ಷಕ ವಸ್ತುಗಳನ್ನು ಬಳಸುವಂತೆ ತಿಳಿಸಿದ ಅವರು, ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದರು.ಸಹಾಯಕ ನಿರ್ವಾಹಕ ಇಂಜಿನಿಯರ್ ಶ್ರೀನಿವಾಸ್ ಮಾತನಾಡಿ, ವಿದ್ಯುತ್ ಸುರಕ್ಷತೆಯ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರತಿವರ್ಷ ವಿದ್ಯಾರ್ಥಿಗಳಿಗೆ ವಪ್ರಬಂಧ, ಭಾಷಣ ಸ್ಪರ್ಧೆಗಳನ್ನು ಹಮ್ಮಿಕೊಂಡು ಅರಿವು ನೀಡಲಾಗುತ್ತಿದೆ ಎಂದು ತಿಳಿಸಿ, ವಿದ್ಯಾರ್ಥಿಗಳು ವಿದ್ಯುತ್ ಅವಘಡಗಳಿಂದ ಪಾರಾಗುವ ಕುರಿತು ಅರಿವು ಪಡೆಯಿರಿ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ರಾಧಮ್ಮ ಹಾಜರಿದ್ದು, ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಶುಭ ಕೋರಿದರು. ಪ್ರಥಮ ಬಹುಮಾನ 3 ಸಾವಿರ, ದ್ವಿತೀಯ ಬಹುಮಾನ 2 ಸಾವಿರ ಹಾಗೂ ತೃತೀಯ ಬಹುಮಾನ 1 ಸಾವಿರ ರೂಗಳನ್ನು ತಾಲ್ಲೂಕುವಾರ ಪ್ರತಿ ಸ್ಪರ್ಧೆ ಹಾಗೂ ಪ್ರತಿ ವರ್ಗಕ್ಕೂ ಬಹುಮಾನ ವಿತರಿಸಲಾಯಿತು.
ಪ್ರಬಂಧ ಸ್ಪರ್ಧೆ– ಪ್ರೌಢಶಾಲಾ ವಿಭಾಗದಿಂದ ಹೋಳೂರು ಸರ್ಕಾರಿ ಪ್ರೌಢಶಾಲೆಯ ಎಸ್.ಸಿಂಜನ ಪ್ರಥಮ, ಸೂಲೂರು ಸರ್ಕಾರಿ ಪ್ರೌಢಶಾಲೆಯ ಆರ್.ದೀಪಕ್ ದ್ವಿತೀಯ ಹಾಗೂ ಕೆಪಿಎಸ್ ನರಸಾಪುರದ ಎಂ.ವರ್ಷಿಣಿ ತೃತೀಯ ಸ್ಥಾನ ಪಡೆದುಕೊಂಡರು.ಪ್ರಾಥಮಿಕ ವಿಭಾಗದಲ್ಲಿ ಕೆಪಿಎಸ್ ನರಸಾಪುರದ ತೇಜಸ್ ಪ್ರಥಮ, ಬಿ.ಕೆ.ಗೌತಮಿ ದ್ವಿತೀಯ, ಶಾಪೂರು ಶಾಲೆಯ ಎಲ್.ಎನ್.ಮಧುಪ್ರಿಯ ತೃತೀಯ ಸ್ಥಾನ ಪಡೆದರು.
**ಭಾಷಣ ಸ್ಪರ್ಧೆ–**ಪ್ರೌಢಶಾಲಾ ವಿಭಾಗದಲ್ಲಿ ಮುದುವಾಡಿ ಸರ್ಕಾರಿ ಪ್ರೌಢಶಾಲೆಯ ಷಾಜಿಯಾ ಪ್ರಥಮ, ಕೆಪಿಎಸ್ ನರಸಾಪುರದ ಕೀರ್ತನಾ ದ್ವಿತೀಯ ಮದನಹಳ್ಳಿ ಮೊರಾರ್ಜಿ ಶಾಲೆಯ ಲಕ್ಷ್ಮೀ ತೃತೀಯ ಸ್ಥಾನ ಪಡೆದರು.ಪ್ರಾಥಮಿಕ ವಿಭಾಗದಲ್ಲಿ ಮದನಹಳ್ಳಿ ಮೊರಾರ್ಜಿಶಾಲೆಯ ದೀಕ್ಷಾ ಪ್ರಥಮ, ಕೆಪಿಎಸ್ ನರಸಾಪುರದ ವಿಷ್ಣುವರ್ಧನ್ ದ್ವಿತೀಯ ಹಗೂ ಸುಗಟೂರುಸರ್ಕಾರಿ ಶಾಲೆಯ ಭಾವನ ತೃತೀಯ ಸ್ಥಾನ ಪಡೆದರು.ಕಾರ್ಯಕ್ರಮದಲ್ಲಿ ಇಸಿಓ ಗಳಾದ ನಂಜುಂಡಗೌಡ, ಎಂ.ಎನ್.ರಾಧಾ, ಕೆ.ಶ್ರೀನಿವಾಸ್, ಸಿಆರ್‌ಪಿ ಕೆ.ಸಿ.ಮಂಜುನಾಥ್ ಸೇರಿದಂತೆ ಬೆಸ್ಕಾಂ ಎಲ್ಲಾ ಶಾಖಾಧಿಕಾರಿಗಳು ಹಾಜರಿದ್ದರು.

# ಶಾಲೆಯ ಭವಿಷ್ಯಕ್ಕೆ ನಾನು ಸಂಪೂರ್ಣ ಸಹಕಾರ: ಮಂಜುನಾಥ್




**ಹನೂರು ಡಿ 27 :–** ಶಾಲೆಯ ಭವಿಷ್ಯಕ್ಕಾಗಿ ನಾನು ಸಂಪೂರ್ಣ ಸಹಕಾರ ನೀಡುತ್ತೇನೆ ಸಂಸ್ಥೆ ಆಡಳಿತ ಮಂಡಳಿಯವರು ಶಾಲೆಯ ಅಭಿವೃದ್ಧಿಗಾಗಿ 10 ಲಕ್ಷ ರೂ ಅನುದಾನವನ್ನು ಕೇಳಿದ್ದರು ಅದಕ್ಕೆ ನಾನು ಶಾಸಕರ ನಿಧಿಯಲ್ಲಿ 15 ಲಕ್ಷ ರೂ ಅನುದಾನವನ್ನು ಶಾಲೆಯ ಅಭಿವೃದ್ಧಿಗಾಗಿ ನೀಡುತ್ತೇನೆ ಎಂದು ಶಾಸಕ ಮಂಜುನಾಥ್ ಅವರು ತಿಳಿಸಿದರು.
ತಾಲೂಕಿನ ಬಂಡಳ್ಳಿ ಗ್ರಾಮದ ಮದರ್ ಮುಜೀದ ಶಾಲೆಯ 33 ನೇ ವರ್ಷದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಶಾಲೆಯಲ್ಲಿ ಓದುವ ಮಕ್ಕಳಿಗೆ ಮಕ್ಕಳಲ್ಲಿರುವ ಉತ್ತಮ ಪ್ರತಿಭೆಗೆ ಬೆಳವಣಿಗೆಗೆ ಸಹಕರಿಸುವ ನಿಟ್ಟಿನಲ್ಲಿ ವೈಯಕ್ತಿಕವಾಗಿಯೂ ಆರ್ಥಿಕವಾಗಿ ಸಹಾಯ ಮಾಡುತ್ತೇನೆ. ಈ ಶಾಲೆಯಲ್ಲಿ ಓದಿರುವ ಸಹಸ್ರಾರು ವಿದ್ಯಾರ್ಥಿಗಳು ನೂರಾರು ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಅರೆ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಮೂಲಕ ಸಮಾಜಕ್ಕೆ ಆಸ್ತಿಯಾಗಿದ್ದಾರೆ.

ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಭರವಸೆ ಬೆಳಕು ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಮಕ್ಕಳಿಗೆ ಭರವಸೆ ತುಂಬಾ ಜವಾಬ್ದಾರಿಯನ್ನು ಈ ಸಂಸ್ಥೆಯ ಕಾರ್ಯದರ್ಶಿಗಳಾದ ಅಂಜುಮ್ ರವರಿಗೆ ನೀಡಲಾಗಿದೆ. ಮಕ್ಕಳಿಗೆ ಶಿಕ್ಷಣಕ್ಕೆ ಪೊ?ಷಕರು ಸಹಕರಿಸಬೇಕು. ಸಂಸ್ಥೆಯಲ್ಲಿ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ಪಡೆದುಕೊಂಡು ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಎಲ್ಲರೂ ಸಹಕಾರ ನೀಡಬೇಕು ಎಂದು ತಿಳಿಸಿದರು.
ಧ್ವಜಾರೋಹಣವನ್ನು ನೆರವೇರಿಸಿದ ಕರ್ನಾಟಕ ರಾಜ್ಯ ಹಜ್ ಸಮಿತಿ ಅಧ್ಯಕ್ಷರಾದ ಜಲ್ ಫಿರಾರ್ ಅಹಮದ್ ಖಾನ್ ಟಿಪ್ಪು ಮಾತನಾಡುತ್ತಾ ಈ ಮಕ್ಕಳಿಗೆ ಶಿಕ್ಷಣ ಒಂದೇ ಸಾಲದು ಇದರೊಂದಿಗೆ ಸಂಸ್ಕಾರವನ್ನು ಕಲಿಸಬೇಕು

ಈ ಕೆಲಸವನ್ನು ಈ ಶಾಲೆ ಮಾಡುತ್ತಿರುವುದು ನಿಜಕ್ಕೂ ಸಂತೋಷ. ಈ ಶಿಕ್ಷಣ ಸಂಸ್ಥೆಗೆ ಆಧುನಿಕ ಶೌಚಾಲಯ ನಿರ್ಮಾಣಕ್ಕಾಗಿ ಒಂದು ಲಕ್ಷ ರೂಗಳನ್ನು ನೀಡುತ್ತೇನೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ತಾಜೀಮುಲ್ಲಾ ಷರೀಫ್, ಚಾಜ್ಮನ್ ರಕ್ಷಣಾ ಸಚಿವಾಲಯ ಇವರು ಶಾಲಾ ಕ್ಯಾಲೆಂಡರ್ 2026 ರಂದು ಬಿಡುಗಡೆಗೊಳಿಸಿದರು. ಅಮ್ಜದ್ ಪಾಷಾ ರವರು ಮಕ್ಕಳಿಗೆ ಉಚಿತ ಶೂಗಳನ್ನು ನೀಡಿದರು, ಸೈಯದ್ ಮಹಮ್ಮದ್ ರವರು ಇಂಗ್ಲೀಷನ ಸಂವಿಧಾನ ಪೀಠಿಕೆಯನ್ನು ಮತ್ತು ಮೊಹಮ್ಮದ್ ಅಜ್ಮದ್ ರವರು ಕನ್ನಡ ಸಂವಿಧಾನ ಪೀಠಿಕೆಯನ್ನು ಉಡುಗೊರೆಯಾಗಿ ನೀಡಿದರು

ಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ಸಹ ಕೊಡುಗೆಯಾಗಿ ನೀಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಸಂಸ್ಥೆಯ ಅಧ್ಯಕ್ಷರಾದ ತಾಯೀಮ್ ಪಾಷಾ ರವರು ಮಾತನಾಡುತ್ತಾ ನಾವು ಈ ಶಾಲೆಯನ್ನ ತೆರೆದಿರುವುದು ಹಣ ಸಂಪಾದನೆಗಾಗಿ ಅಲ್ಲ ನಮ್ಮ ಊರಿನ ಹಾಗೂ ಸುತ್ತಮುತ್ತಲಿನ ಊರಿನ ಮಕ್ಕಳಿಗೆ ಶಿಕ್ಷಣ ಪಡೆಯಲು ಅನುಕೂಲವಾಗಲೆಂದು ತೆರೆದಿದ್ದೇವೆ ಈ ಶಾಲೆಯನ್ನು ಮುಂದೆ ಮಾದರಿ ಶಾಲೆಯನ್ನಾಗಿ ಮಾಡುತ್ತೇವೆ ಎಂದರು.
ಈ ಶಾಲೆಯಲ್ಲಿ ಓದಿದ ಪ್ರಥಮ ಬ್ಯಾಚ್ ವಿದ್ಯಾರ್ಥಿಗಳಿಗೆ ಸೇರಿ ಎಲ್ಲಾ ಗುರುವಂದದವರಿಗೆ ಗೌರವ ಸಮರ್ಪಿಸುವ ಮೂಲಕ ಗುರು ಶಿಷ್ಯರ ಪರಂಪರೆಯನ್ನು ವಿಶಿಷ್ಟ ರೀತಿಯಲ್ಲಿ ಆರಂಭಿಸಲಾಯಿತು. ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪೊ?ಷಕರಿಗೆ ಬಹುಮಾನ ವಿತರಿಸಲಾಯಿತು. ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು.

ಈ ಸಂದರ್ಭದಲ್ಲಿ ಸಂಸ್ಥೆ ಕಾರ್ಯದರ್ಶಿ ಅಂಜುಮ್, ಜಸ್ಸಿಂ ಪಾಷಾ, ಶಾಲೆಯ ಮುಖ್ಯ ಶಿಕ್ಷಕರಾದ ಬಸವರಾಜು, ನಟರಾಜು, ಬಸವಣ್ಣ, ಅಪ್ಸಾನ, ಬುಶ್ರಿ, ಸಾಯಿಮಾ, ಸಾದಿಯಾ, ಶಿಕ್ಷಕರಾದ ದೇವಿಕ ಮತ್ತು ಮಹಮ್ಮದ್ ಜೊಲ್ ಸೇರಿದಂತೆ ಇನ್ನಿತರರು ಇದ್ದರು.

# ವಿಕ್ಷಿತ್ ಭಾರತ್ ಗುರಿಯನ್ನು ಮುನ್ನಡೆಸಲಿದ್ದಾರೆ ಭಾರತದ Gen Z & Alpha : ಪ್ರಧಾನಿ ಮೋದಿ

**ನವದೆಹಲಿ, ಡಿ.27–** ಯುವಜನರ ಸಬಲೀಕರಣದ ಮೇಲೆ ಕೇಂದ್ರಿಕರಿಸಿ, ಅವರನ್ನು ರಾಷ್ಟ್ರ ನಿರ್ಮಾಣದ ಕೇಂದ್ರದಲ್ಲಿ ಇರಿಸುವ ಮೂಲಕ ಹೊಸ ನೀತಿಗಳನ್ನು ರೂಪಿಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.
ನವದೆಹಲಿಯ ಭಾರತ್ ಮಂಟಪದಲ್ಲಿ ನಡೆದ ವೀರ್ ಬಾಲ್ ದಿವಸ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಅವರು ಜನರಲ್ ಝಡ್ ಮತ್ತು ಜನರಲ್ ಆಲ್ಫಾವನ್ನು ಪ್ರತಿನಿಧಿಸುತ್ತಾರೆ ಮತ್ತು ಅವರ ಪೀಳಿಗೆಯೇ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಗುರಿಯತ್ತ ಕೊಂಡೊಯ್ಯುತ್ತದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವರ ಸಾಮರ್ಥ್ಯ ಮತ್ತು ಆತ್ಮವಿಶ್ವಾಸವನ್ನು ನೋಡುತ್ತಾರೆ ಮತ್ತು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಆದ್ದರಿಂದ ಅವರ ಮೇಲೆ ಹೆಚ್ಚಿನ ನಂಬಿಕೆ ಇಡುತ್ತಾರೆ ಎಂದು ಅವರು ಹೇಳಿದರು. ಮಗು ಬುದ್ಧಿವಂತಿಕೆಯಿಂದ ಮಾತನಾಡಿದರೂ ಅದನ್ನು ಸ್ವಿಕರಿಸಬೇಕು, ಅಂದರೆ ಶ್ರೇಷ್ಠತೆಯನ್ನು ವಯಸ್ಸಿನಿಂದ ವ್ಯಾಖ್ಯಾನಿಸಲಾಗುವುದಿಲ್ಲ ಆದರೆ ಕಾರ್ಯಗಳು ಮತ್ತು ಸಾಧನೆಗಳಿಂದ ವ್ಯಾಖ್ಯಾನಿಸಲಾಗುತ್ತದೆ ಎಂದು ಪ್ರಧಾನಿ ಮೋದಿ ವಿವರಿಸಿದರು.
ಯುವಜನರು ಇತರರಿಗೆ ಸ್ಫೂರ್ತಿ ನೀಡುವ ಕಾರ್ಯಗಳನ್ನು ಸಾಧಿಸಬಹುದು ಎಂದು ಅವರು ಒತ್ತಿ ಹೇಳಿದರು ಮತ್ತು ಅನೇಕರು ಇದನ್ನು ಈಗಾಗಲೇ ಪ್ರದರ್ಶಿಸಿದ್ದಾರೆ. ಆದಾಗ್ಯೂ, ಈ ಸಾಧನೆಗಳನ್ನು ಕೇವಲ ಆರಂಭವಾಗಿ ನೋಡಬೇಕು, ಏಕೆಂದರೆ ಇನ್ನೂ ಹೆಚ್ಚಿನವು ಮುಂದುವರಿಯಬೇಕಾಗಿದೆ, ಕನಸುಗಳನ್ನು ಆಕಾಶಕ್ಕೆ ಕೊಂಡೊಯ್ಯಬೇಕಾಗಿದೆ ಎಂದು ಅವರು ಒತ್ತಿ ಹೇಳಿದರು.
ಈ ಪೀಳಿಗೆ ಅದೃಷ್ಟಶಾಲಿ ಎಂದು ಹೇಳಿದ ಪ್ರಧಾನಿ, ಹಿಂದಿನ ಕಾಲದಲ್ಲಿ ಯುವಕರು ಹತಾಶೆಯ ವಾತಾವರಣದಿಂದಾಗಿ ಕನಸು ಕಾಣಲು ಸಹ ಭಯಪಡುತ್ತಿದ್ದರು, ಆದರೆ ಅವರ ಪ್ರತಿಭೆಯೊಂದಿಗೆ ದೇಶವು ದೃಢವಾಗಿ ನಿಂತಿದೆ ಎಂದು ಹೇಳಿದರು. ಇಂದು ದೇಶವು ಪ್ರತಿಭೆಯನ್ನು ಹುಡುಕುತ್ತದೆ, ವೇದಿಕೆಗಳನ್ನು ಒದಗಿಸುತ್ತದೆ ಮತ್ತು 140 ಕೋಟಿ ನಾಗರಿಕರ ಶಕ್ತಿಯನ್ನು ಅವರ ಆಕಾಂಕ್ಷೆಗಳೊಂದಿಗೆ ಜೋಡಿಸುತ್ತದೆ ಎಂದು ಅವರು ಹೇಳಿದರು. ಡಿಜಿಟಲ್ ಇಂಡಿಯಾದ ಯಶಸ್ಸಿನೊಂದಿಗೆ, ಯುವಕರು ಇಂಟರ್ನೆಟ್ ಮತ್ತು ಕಲಿಕೆಗೆ ಸಂಪನ್ಮೂಲಗಳ ಶಕ್ತಿಯನ್ನು ಹೊಂದಿದ್ದಾರೆ, ವಿಜ್ಞಾನ, ತಂತ್ರಜ್ಞಾನ ಮತ್ತು ಉದ್ಯಮಶೀಲತೆಯನ್ನು ಅನುಸರಿಸುವವರಿಗೆ ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಕ್ರೀಡೆಯಲ್ಲಿ ಮುಂದುವರಿಯುವವರಿಗೆ ಖೇಲೋ ಇಂಡಿಯಾದಂತಹ ಧ್ಯೆಯಗಳನ್ನು ಹೊಂದಿದ್ದಾರೆ ಎಂದು ಅವರು ಎತ್ತಿ ತೋರಿಸಿದರು.
ಕೇವಲ ಎರಡು ದಿನಗಳ ಹಿಂದೆ, ಅವರು ಸಂಸದ್ ಖೇಲ್ ಮಹೋತ್ಸವದಲ್ಲಿ ಭಾಗವಹಿಸಿದ್ದರು, ಯುವಜನರ ಪ್ರಗತಿಯನ್ನು ಬೆಂಬಲಿಸಲು ಲಭ್ಯವಿರುವ ಹಲವು ವೇದಿಕೆಗಳನ್ನು ಒತ್ತಿ ಹೇಳಿದರು.ಪ್ರಧಾನಿ ಅವರು ಗಮನಹರಿಸುವಂತೆ ಒತ್ತಾಯಿಸಿದರು, ಅಲ್ಪಾವಧಿಯ ಜನಪ್ರಿಯತೆಯ ಹೊಳಪಿನಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ನೀಡಿದರು ಮತ್ತು ಚಿಂತನೆ ಮತ್ತು ತತ್ವಗಳ ಸ್ಪಷ್ಟತೆ ಅತ್ಯಗತ್ಯ ಎಂದು ಒತ್ತಿ ಹೇಳಿದರು.
ಅವರು ರಾಷ್ಟ್ರದ ಆದರ್ಶಗಳು ಮತ್ತು ಮಹಾನ್ ವ್ಯಕ್ತಿಗಳಿಂದ ಕಲಿಯಲು ಮತ್ತು ಅವರ ಯಶಸ್ಸು ತಮಗೆ ಸೀಮಿತವಾಗಿರದೆ ದೇಶದ ಯಶಸ್ಸಾಗುವಂತೆ ನೋಡಿಕೊಳ್ಳಲು ಕರೆ ನೀಡಿದರು.ಮೇರಾ ಯುವ ಭಾರತ್‌ನಂತಹ ವೇದಿಕೆಗಳ ಮೂಲಕ ಯುವಕರನ್ನು ಸಂಪರ್ಕಿಸಲು, ಅವರಿಗೆ ಅವಕಾಶಗಳನ್ನು ಒದಗಿಸಲು ಮತ್ತು ನಾಯಕತ್ವ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ಅವರು ಒತ್ತಿ ಹೇಳಿದರು.

ಬಾಹ್ಯಾಕಾಶ ಆರ್ಥಿಕತೆಯನ್ನು ಮುನ್ನಡೆಸುತ್ತಿರಲಿ, ಕ್ರೀಡೆಗಳನ್ನು ಉತ್ತೇಜಿಸುತ್ತಿರಲಿ, ಫಿನ್‌ಟೆಕ್ ಮತ್ತು ಉತ್ಪಾದನಾ ವಲಯಗಳನ್ನು ವಿಸ್ತರಿಸುತ್ತಿರಲಿ ಅಥವಾ ಕೌಶಲ್ಯ ಅಭಿವೃದ್ಧಿ ಮತ್ತು ಇಂಟರ್ನ್‌ಶಿಪ್‌ಗಳಿಗೆ ಅವಕಾಶಗಳನ್ನು ಸೃಷ್ಟಿಸುತ್ತಿರಲಿ, ಪ್ರತಿಯೊಂದು ಉಪಕ್ರಮದ ತಿರುಳಾಗಿ ಯುವಕರು ಉಳಿಯುತ್ತಾರೆ ಎಂದು ಪ್ರಧಾನಿ ಮೋದಿ ಒತ್ತಿ ಹೇಳಿದರು.



ಪ್ರತಿಯೊಂದು ವಲಯದಲ್ಲೂ ಯುವಕರಿಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತಿವೆ ಎಂದು ಅವರು ಹೇಳಿದರು.
ಜನವರಿ 9, 2022 ರಂದು ಶ್ರೀ ಗುರು ಗೋವಿಂದ ಸಿಂಗ್ ಜಿ ಅವರ ಪ್ರಕಾಶ್ ಪುರಬ್ ಸಂದರ್ಭದಲ್ಲಿ, ಶ್ರೀ ಗುರು ಗೋವಿಂದ ಸಿಂಗ್ ಜಿ ಅವರ ಪುತ್ರರಾದ ಸಾಹಿಬ್‌ಜಾದಾಸ್ ಬಾಬಾ ಜೋರಾವರ್ ಸಿಂಗ್ ಜಿ ಮತ್ತು ಬಾಬಾ ಫತೇಹ್ ಸಿಂಗ್ ಜಿ ಅವರ ಹುತಾತ್ಮತೆಯ ಸ್ಮರಣಾರ್ಥ ಡಿಸೆಂಬರ್ 26 ಅನ್ನು ವೀರ್ ಬಾಲ್ ದಿವಸ್ ಎಂದು ಆಚರಿಸಲಾಗುವುದು ಎಂದು ಪ್ರಧಾನಿ ಘೋಷಿಸಿದ್ದರು, ಅವರ ಅಪ್ರತಿಮ ತ್ಯಾಗವು ಪೀಳಿಗೆಗೆ ಸ್ಫೂರ್ತಿ ನೀಡುತ್ತಿದೆ.

## ಬೀದರ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ವೀರ ಬಾಲ ದಿವಸ ಆಚರಣೆ




**ಬೀದರ ಡಿ.27:** ಭಾರತೀಯ ಜನತಾ ಪಕ್ಷದ ಜಿಲ್ಲಾ ಕಚೇರಿಯಲ್ಲಿ ವೀರ ಬಾಲ ದಿವಸ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗುರು ಗೋವಿಂದ ಸಿಂಗರ ನಾಲ್ಕುಜನ ವೀರ ಪುತ್ರರಾದ ಬಾಬಾ ಅಜೀತ ಸಿಂಗ್, ಬಾಬಾ ಜುಝಾರ ಸಿಂಗ್ ಬಾಬಾ ಜೊರಾವರ ಸಿಂಗ್ ಹಾಗೂ ಬಾಬಾ ಫತೇಹ ಸಿಂಗ್‌ರ ಬಲಿದಾನವನ್ನು ಸ್ಮರಿಸುತ್ತಾ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.
ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪೀರಪ್ಪಾ ಔರಾದೆ ರವರು ಗುರು ಗೊವಿಂದ ಸಿಂಘರ ನಾಲ್ಕುಜನ ವೀರ ಪುತ್ರರಾದ ಬಾಬಾ ಅಜೀತ ಸಿಂಗ್, ಬಾಬಾ ಜುಝಾರ ಸಿಂಗ್, ಬಾಬಾ ಜೊರಾವರ ಸಿಂಗ್ ಹಾಗೂ ಬಾಬಾ ಫತೇಹ ಸಿಂಗ್‌ರ ಸರ್ವೊಚ್ಚ ಬಲಿದಾನವನ್ನು ಸ್ಮರಿಸುತ್ತಾ 1704 ರಲ್ಲಿ ಮುಘಲ ಶಾಸಕ ಔರಂಗ ಜೇಬನ ಅತ್ಯಾಚಾರದ ವಿರುದ್ಧ ಧರ್ಮದ ರಕ್ಷಣೆ ಮಾಡುತ್ತಾ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ವೀರಗತಿಕರಾದರು ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ರಾಜಕುಮಾರ ಪಾಟೀಲ, ಸುಭಾಷ ಮಡಿವಾಳ, ಒ.ಬಿ.ಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ನೀಲೇಶ ರಕ್ಷಾಳೆ, ರಮೇಶ ಬಿರಾದಾರ, ಗ್ರಾಮಾಂತರ ಮಂಡಲ ಅಧ್ಯಕ್ಷರಾದ ದೀಪಕ ಗಾದಗೆ, ರೋಷನ ವರ್ಮಾ, ನೀತಿನ ನವಲಕೆಲೆ, ಮಾಯಾವತಿ ಕೋಟೆ, ಮಹಾನಂದಾ ಕೋಟೆ, ಭಿಮಣ್ಣಾ ಚಿಕ್ಕಪೇಟ, ಕೆ. ಮುದಸ್ಸರ ಅಹ್ಮದ್, ಸಂಗಮೇಶ ಗುಮ್ಮಾ, ವಿಜಯಕುಮಾರ ಹೆಗ್ಗೆ, ಮಹೇಶ ದೊಡ್ಡಿ, ಸಂಜು ಜಿರ್ಗೆ, ಬಸವ ಮೂಲಗೆ, ಹಾಗೂ ಜಿಲ್ಲಾ ಮಾಧ್ಯಮ ಸಂಚಾಲಕರಾದ ಶ್ರೀನಿವಾಸ್ ಚೌದರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ನಾಡಿದ್ದು ನಗರದಲ್ಲಿ ಕಾನಿಪ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

**ಬಳ್ಳಾರಿ, ಡಿ.27:** ನಗರದ ಚೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ನಾಡಿದ್ದು (ಡಿಸೆಂಬರ್ 29) ಬೆಳಿಗ್ಗೆ 9.30ಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2025–28 ನೇ ಸಾಲಿನ ನೂತನ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಆಯೋಜಿಸಲಾಗಿದೆ.
ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ. ಜಿಲ್ಲಾ ಅಧ್ಯಕ್ಷ ಎನ್.ವೀರಭದ್ರಗೌಡ ಅಧ್ಯಕ್ಷತೆವಹಿಸಲಿದ್ದು.ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ ಲೋಕೇಶ್ ಮತ್ತು ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡುಅವರು ಪ್ರತಿಜ್ಞಾ ವಿಧಿ ಬೋಧನೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಈ. ತುಕಾರಾಂ, ಗ್ರಾಮೀಣ ಶಾಸಕ, ಮಾಜಿ ಸಚಿವ ಬಿ. ನಾಗೇಂದ್ರ, ಶಾಸಕರಾದ ಕಂಪ್ಲಿ ಶಾಸಕ ಜೆ.ಎನ್.ಗಣೇಶ, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ವಿಧಾನ ಪರಿಷತ್ ಸದಸ್ಯ ವೈ.ಎಂ. ಸತೀಶ್, ಮಹಾನಗರ ಪಾಲಿಕೆ ಮೇಯರ್ ಪಿ. ಗಾದೆಪ್ಪ, ಲೀಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು ಆಗಮಿಸಲಿದ್ದಾರೆ.
ಬಳ್ಳಾರಿ ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ಮತ್ತು ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ವಿ. ತುಕಾರಾಂ ರಾವ್ ಅವರ ಗೌರವ ಉಪಸ್ಥಿತಿ ಇರಲಿದೆ.
ಕಾರ್ಯಕ್ರಮಕ್ಕೆ ಕಾರ್ಯ ನಿರತ ಪತ್ರಕರ್ತರ ಸಂಘದ ಸರ್ವ ಸದಸ್ಯರು ಪಾಲ್ಗೊಳ್ಳಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ನರಸಿಂಹ ಮೂರ್ತಿ ಕುಲಕರ್ಣಿ ಮನವಿ ಮಾಡಿದ್ದಾರೆ.

# 29ರಂದು ಚಿದ್ರಿಯಲ್ಲಿ ಬೊಮ್ಮಗೊಂಡೇಶ್ವರ ದೇವಸ್ಥಾನದ ಭೂಮಿ ಪೂಜೆ: ಪಂಡಿತರಾವ ಚಿದ್ರಿ

**ಬೀದರ್:ಡಿ.27:** ಈ ತಿಂಗಳ 29ರಂದು ಬೆಳಿಗ್ಗೆ 11 ಗಂಟೆಗೆ ನಗರದ ಚಿದ್ರಿಯಲ್ಲಿರುವ ಬೋಮಗೊಂಡೇಶ್ವರ ಕಾಲೋನಿಯಲ್ಲಿ ಮಹಾತ್ಮ ಬೊಮ್ಮಗೊಂಡೇಶ್ವರ ಜನ್ಮಭೂಮಿ ಚಿದ್ರಿ ವತಿಯಿಂದ ದೇವಸ್ಥಾನದ ನೂತನ ಕಟ್ಟಡದ ಭೂಮಿ ಪೂಜೆ ನೆರವೇರಲಿದೆ ಎಂದು ಟ್ರಸ್ಟ್ ಅಧ್ಯಕ್ಷರು ಹಾಗೂ ಕಾರ್ಯಕ್ರಮದ ರುವಾರಿ ಪಂಡಿತರಾವ ಚಿದ್ರಿ ತಿಳಿಸಿದರು.




ನಗರದ ಜಿಲ್ಲಾ ಪತ್ರಿಕಾ ಬವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, 14ನೇ ಶತಮಾನದಲ್ಲಿ ,ಮಹಾತ್ಮ ಬೊಮ್ಮಗೊಂಡೇಶ್ವರ ಬಾಳಿ ಬದುಕಿರುವ ಇತಿಹಾಸ ಲಭ್ಯವಾಗಿದೆ. ಆಗ ನೀರಿನ ಆಭಾವವಿತ್ತು. ಇಲ್ಲಿಯ ರಾಜನ ಸೈನಿಕರಿಗೆ ಬಾಯಾರಿಕೆ ಆದಾಗ ಸೈನಿಕರು ಬೊಮ್ಮಗೊಂಡೇಶ್ವರನನ್ನು ವಿಚಾರಿಸಿ ನೀರು ಎಲ್ಲಿ ದೊರೆಯುತ್ತದೆ ಎಂದು ಕೇಳಿದಾಗ ತನ್ನ ಕೈಯ್ಯಲ್ಲಿರುವ ಕೋಲಿನಿಂದ ಅಲ್ಲಿದ್ದ ಕಲ್ಲು ಜಾರಿಸಿದಾಗ ನೀರಿನ ಝರಿ ಹರಿದು ಸೈನಿಕರೆಲ್ಲ ನೀರು ಕುಡಿದರೆಂಬ ಇತಿಹಾಸ ನಾಗಪ್ಪ ಚಿದ್ರಿಯವರಿಂದ ತಿಳಿದುಬಂದಿದೆ. ನಾಗಪ್ಪ ಚಿದ್ರಿಯವರು ನಗರದ ನಾವದಗೇರಿಯಲ್ಲಿ ಮಹಾತ್ಮ ಬೊಮ್ಮಗೊಂಡೇಶ್ವರ ಹೆಸರಿನಲ್ಲಿ 2 ಎಕರೆ ಜಮಿನು ಪಡೆದು ಅಲ್ಲಿ ಅಭಿವೃದ್ಧಿಪಡಿಸುವುದಲ್ಲದೇ ಬೀದರ್ ಕೋಟೆಯೊಳಗಿರುವ ಮಹಾತ್ಮ ಬೊಮ್ಮಗೊಂಡೇಶ್ವರ ಕೆರೆ ಇಲ್ಲಿ ನಿಂತು ನೊಡಬೇಕೆಂಬ ರೀತಿಯಲ್ಲಿ ಚಿಂತಿಸಿರುವರು. ಒಟ್ಟಾರೆ ನಾಗಪ್ಪ ಚಿದ್ರಿಯವರಿಂದ ನಮಗೆ ಹಾಗೂ ಇಡೀ ಜಿಲ್ಲೆಯ ಜನಮಾನಸಕ್ಕೆ ಮಹಾತ್ಮ ಬೊಮ್ಮಗೊಂಡೇಶ್ವರನ ಚರಿತ್ರೆ ಗೊತ್ತಾಗಿದೆ. ಅವರನ್ನು ಸದಾ ಸ್ಮರಿಸಲೆಂದೇ ಚಿದ್ರಿಯಲ್ಲಿ ಅವರ ಹೆಸರಲ್ಲಿ ಟ್ರಸ್ಟ್ ಸ್ಥಾಪಿಸಿ ಮಂದಿರ ನಿರ್ಮಿಸಲು ಭೂಮಿ ಪೂಜೆ ಆಯೋಜಿಸಲಾಗಿದೆ ಎಂದು ಪಂಡಿತರಾವ ಚಿದ್ರಿ ವಿವರಿಸಿದರು.

ಕಾರ್ಯಕ್ರಮದ ಸ್ವಾಗತ ಸಮಿತಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ಸಮಾರಂಭದ ವಿವರಣೆ ನೀಡಿ, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಅವಧೂತಪೂರ ಯಲ್ಲಾಲಿಂಗ ಮಠದ ಪೂಜ್ಯ ಮಚ್ಚೇಂದ್ರ ಮುತ್ಯಾ, ಚೊಂಡಿ ಮಠದ ಜಗನ್ನಾಥ ಮಹಾರಾಜ, ಉಚ್ಚಾದ ಗೋಪಾಲ ಮಹಾರಾಜ, ಹುಮನಾಬಾದಿನ ಸಿದ್ದಯ್ಯ ಆಧುನಿಕ ಒಡೆಯರ್, ಮೈಲಾರದ ಪೂಜ್ಯ ಮಲ್ಲಪ್ಪ ಹಿರೇವಗ್ಗೆ ವಹಿಸಲಿದ್ದು, ಭೂಮಿ ಪೂಜೆಯನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರು ಹಾಗೂ ಮಾಜಿ ಸಚಿವ ಹೆಚ್ ಎಂ ರೇವಣ್ಣ ನೆರವೇರಿಸುವರು. ಪೌರಾಡಳಿತ ಹಾಗೂ ಹಜ್ ಸಚಿವ ರಹೀಮ್ ಖಾನ್ ಅಧ್ಯಕ್ಷತೆ ವಹಿಸಲಿದ್ದು ರತ್ನಗಂಬಳಿ ಪೂಜೆಯನ್ನು ಸಂಸದ ಸಾಗರ್ ಖಂಡ್ರೆ ನೆರವೇರಿಸುವರು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಸಚಿವ ರಾಜಶೇಖರ್ ಪಾಟೀಲ್ ಹುಮನಾಬಾದ್ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ವಿಧಾನ ಪರಿಷತ್ ಸದಸ್ಯರಾದ ಡಾ ಚಂದ್ರಶೇಖರ್ ಪಾಟೀಲ್, ಭೀಮರಾವ್ ಪಾಟೀಲ್, ಎಂ.ಜಿ ಮೊಳೆ, ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ, ಮಾಜಿ ವಿಧಾನ ಪರಿಷತ್ ಸಭಾಪತಿ ರಘುನಾಥರಾವ ಮಲ್ಕಾಪುರೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ, ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜು ಜಾಬಶೆಟ್ಟಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಗೀತಾ ಪಂಡಿತರಾವ ಚಿದ್ರಿ, ಬೆಂಗಳೂರಿನ ಆರ್.ಟಿ.ಓ ಕಚೇರಿಯ ರಾಜಶೇಖರ ಬಿರಾದಾರ ಚಿದ್ರಿ ಮುಖ್ಯ ಅಥಿತಿಗಳಾಗಿ ಭಾಗವಹಿಸುವರು ಅತಿಥಿಗಳಾಗಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ ಅರಳಿ, ಕೆ ಪುಂಡಲಿಕರಾವ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮನ್ನಾನ್ ಸೇಠ್, ಬಿಜೆಪಿ ಯುವ ಮುಖಂಡ ಈಶ್ವರ್‌ಸಿಂಗ್ ಠಾಕೂರ್, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ವಿಜಯಕುಮಾರ ಖಾಶೆಂಪುರ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಬಾಬುರಾವ್ ಮಲ್ಕಾಪುರೆ ಪಿಎಸ್‌ಡಿ ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಮಾಳಗೆ, ಬುತ್ತಿ ಬಸವಣ್ಣ ದೇವಸ್ಥಾನ ಕಮಿಟಿ ಅಧ್ಯಕ್ಷ ರಮೇಶ ಮಾಶೆಟ್ಟಿ ಚಿದ್ರಿ, ನಗರಸಭೆ ಸದಸ್ಯರಾದ ಇಂದುದುಮತಿ ಚಿದ್ರಿ, ರಾಜಾರಾಮ ಚಿಟ್ಟಾ, ಗೊಂಡ ಸಮಾಜದ ಮಾಜಿ ಅಧ್ಯಕ್ಷ ಎಂ.ಎಸ್ ಕಟಗಿ, ಪತ್ರಕರ್ತ ಮಾಳಪ್ಪ ಅಡಸಾರೆ, ಗೋಂಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಸಂತೋಷ ಜೋಳದಾಬಕೆ, ಉದ್ಯಮಿ ಡಾ.ರತಿಕಾಂತ ಮಜಗೆ ಹಾಗೂ ಇತರರು ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸುವರು.
ಆದ ಕಾರಣ ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸೋಮಶೇಖರ ಬಿರಾದಾರ ಚಿದ್ರಿ ಕೋರಿದರು.
ಚೊಂಡಿ ಮಠದ ಪೂಜ್ಯ ಜಗನ್ನಾಥ ಮಹಾರಾಜ, ಕರ್ನಾಟಕ ಗೋಂಡ ಸಮಾಜದ ಮಾಜಿ ಅಧ್ಯಕ್ಷ ಎಮ್.ಎಸ್.ಕಟಗಿ, ಪತ್ರಕರ್ತ ಮಾಳಪ್ಪ ಅಡಸಾರೆ, ಗೋಂಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಸಂತೋಷ ಜೋಳದಾಬಕೆ, ಬುತ್ತಿ ಬಸವಣ್ಣ ದೇವಸ್ಥಾನ ಸಮಿತಿ ಅಧ್ಯಕ್ಷ ರಮೇಶ ಮಾಶೆಟ್ಟಿ, ಸಮಾಜದ ಮುಖಂಡರಾದ ತುಕಾರಾಮ ರಾಗಾಪುರ, ದೀಪಕ ಚಿದ್ರಿ, ರಾಜಕುಮಾರ ಚಿದ್ರಿ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಶ್ರದ್ಧಾ ಭಕ್ತಿ ಗಳಿಂದ ಜರುಗಿದ ಅಯ್ಯಪ್ಪ ಸ್ವಾಮಿ ಮಹಾ ಪೂಜೆ ಹಾಗೂ ಪಾದ ಪೂಜೆ

**ಬಾಗಲಕೋಟೆ :ಡಿ.27:**ಜಿಲ್ಲೆಯ ಜಮಖಂಡಿ ನಗರದ ಶಭರಿ ಸಾಗರ ಹೋಟೆಲ್ ನಲ್ಲಿ ಭಾಸ್ಕರ ದೇವಾಡಿಗ ಹಾಗೂ ಸುಜಾತಾ ದೆವಾಡಿಗಾ ದಂಪತಿಗಳ ನೇತೃತ್ವದಲ್ಲಿ ಅಯ್ಯಪ್ಪ ಸ್ವಾಮಿ ಮಹಾಪೂಜೆ ಮತ್ತು ಪಾದ ಪೂಜೆ ಹಾಗೂ ಪ್ರಸಾದ ಕಾರ್ಯಕ್ರಮವು ಶನಿವಾರ ಮುಂಜಾನೆ 8ರಿಂದ 10 ಗಂಟೆಯ ವರೆಗೆ ಭಕ್ತಿಭಾವದ ನಡುವೆ ಶ್ರದ್ಧಾ ಭಕ್ತಿಗಳಿಂದ ಜರುಗಿತು.
ಶನಿವಾರ ಮುಂಜಾನೆ ನಡೆದ ಅಯ್ಯಪ್ಪ ಸ್ವಾಮಿ ಮಹಾಪೂಜೆ ಹಾಗೂ ಪಾದ ಪೂಜೆ ಕಾರ್ಯಕ್ರಮದಲ್ಲಿ ಹೋಟೆಲ್ ಅಸೋಶಿಯನ್ ಅಧ್ಯಕ್ಷ ಹಾಗೂ ಸದಸ್ಯರು ಭಾಗವಹಿಸಿ,ಪ್ರಸಾದವನ್ನು ಸ್ವೀಕರಿಸುವ ಮೂಲಕ ಅಯ್ಯಪ್ಪಸ್ವಾಮಿ ಭಕ್ತಿ ಸೇವೆಗೆ ಪಾತ್ರರಾದರು.



ಗುರುಸ್ವಾಮಿಗಳಾದ ಹೇಮಂತ್ ಗುರುಸ್ವಾಮಿ,ಮಹಾದೇವ ಗುರುಸ್ವಾಮಿ,ಶಿವಾಜಿ ಗುರುಸ್ವಾಮಿ,ಸುರೇಶ ಗುರುಸ್ವಾಮಿ,ರವಿ ಗುರಸ್ವಾಮಿ,ಆನಂದ ಗುರುಸ್ವಾಮಿ,ಶ್ರೀಶೈಲ ಬಡಗೇರ ಇವರು ಶ್ರೀ ಅಯ್ಯಪ್ಪ ಸ್ವಾಮಿಯ ಮಹಾಪೂಜೆಯಲ್ಲಿ ಭಾಗವಹಿಸಿ ವಿಶೇಷ ಪೂಜೆ ನೆರವೇರಿಸಿದರು.
ಬಳಿಕ ಮಹಾಪೂಜೆಗೆ ವಿವಿಧ ಕಡೆಗಳಿಂದ ಆಗಮಿಸಿದ್ದ ಭಕ್ತಾದಿಗಳು ವಿಶೇಷ ಪೂಜೆ ಸಲ್ಲಿಸಿ ಪುನೀತರಾದರು. ನಂತರ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಪ್ರಸಾದವನ್ನು ಸ್ವೀಕರಿಸಿದರು. ಅಯ್ಯಪ ಸ್ವಾಮಿ ವಿಗ್ರಹಕ್ಕೆ ಹೂವುಗಳಿಂದ ವಿಶೇಷ ಅಲಂಕಾರದೊಂದಿಗೆ ದೀಪಾಲಂಕಾರವನ್ನು ಮಾಡಲಾಗಿತ್ತು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE